

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
SIHI KAHI
KANNADA DAILY MORNING
BAGALKOT
RNI REG No. : KARKAN/2016/75068

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

Volume : 07 | Issue : 75 | Tuesday 26-11-2024 | E-mail : maruti.b.hosamani76@gmail.com | Page: 4 | Price : Rs. 1/-

## ‘ರುದ್ರಾಭಿಷೇಕಂ’ ಚಲನಚಿತ್ರಕ್ಕೆ ಮುಹೂರ್ತ

**ಬೆಂಗಳೂರು :** ಫ್ಯಾನ್ ಇಂಡಿಯಾ ಕ್ರಿಯೇಷನ್ಸ್ ವಿಜಯಪುರವರ ಪ್ರಥಮ ಕಾಣಿಕೆ ನಟ ವಿಜಯ ರಾಘವೇಂದ್ರ ಒಬ್ಬ ವೀರಗಾಸೆ ಕಲಾವಿದನಾಗಿ ಕಾಣಿಸಿಕೊಳ್ಳುತ್ತಿರುವ ‘ರುದ್ರಾಭಿಷೇಕಂ’ ಚಿತ್ರದ ಮುಹೂರ್ತಸಮಾರಂಭಬೆಂಗಳೂರಿನವಿಜಯಪುರದ ಫಾರಂ ಹೌಸನಲ್ಲಿ ಸರಳವಾಗಿ ನೆರವೇರಿತು.

ಸಮಾರಂಭದ ನಂತರ ವಿಜಯ ರಾಘವೇಂದ್ರ ಮಾತನಾಡಿ ನಮ್ಮ ನಾಡಿನ ಸಾಂಸ್ಕೃತಿಕ ಹಿನ್ನೆಲೆಯ ಜೊತೆಗೆ ಒಂದು ಸಣ್ಣ ಇತಿಹಾಸ, ಅದರ ವೈಭವವನ್ನು ತೆಗೆದುಕೊಂಡು ಹೋಗುವ ಕಥೆ. ಕಮರ್ಷಿಯಲ್ ಎಲಿಮೆಂಟ್ ಒಳಗೊಂಡಿದ್ದರೂ ಸಾಕಷ್ಟು ಡಿವೈನಿಟಿ ಇರುವ ಚಿತ್ರ. ವೀರಗಾಸೆ ಕಲೆಯ ಹಿನ್ನೆಲೆಯಲ್ಲಿ ಒಂದೊಳ್ಳೆ ಕಾನ್ಸೆಪ್ಟ್ ಇಟ್ಟುಕೊಂಡು ನಿರ್ದೇಶಕರು ಚಿತ್ರ ನಿರ್ದೇಶಿಸುತ್ತಿದ್ದು ನಾನು ಇದೇ ಮೊದಲ ಬಾರಿಗೆ ಒಬ್ಬ ವೀರಗಾಸೆಕಲಾವಿದನಾಗಿಕಾಣಿಸಿಕೊಳ್ಳುತ್ತಿರುವೆ.ಅಷ್ಟೇ ಅಲ್ಲ ಚಿತ್ರದಲ್ಲಿ ಸಾಕಷ್ಟು ಗೆಟಪ್‌ಗಳಿವೆ ಎಂದರು. ನಾನು ಕಳೆದ ಎರಡುವರೆ ದಶಕಗಳಿಂದ ಚಿತ್ರರಂಗದಲ್ಲಿದ್ದೇನೆ. ಹಲವಾರು ಚಿತ್ರಗಳಿಗೆ ಸಹನಿರ್ದೇಶನ,ಕಥೆ,ಚಿತ್ರಕಥೆ ಬರೆದಿದ್ದೇನೆ. ಇದೊಂದು ಟ್ರೆಡಿಷನಲ್ ಸಬ್ಜೆಕ್ಟ್. ನಮ್ಮ ನಾಡಿನಅದರಲ್ಲೂದಕ್ಷಿಣಭಾರತದಹೆಸರಾಂತಜನಪದ ಕಲೆಯನ್ನು ಒಳಗೊಂಡಿರುವ ಪ್ರಚಲಿತವಾಗಿರುವ ಕಥೆ ಇದು ಒಂದುವರೆ ವರ್ಷದಿಂದ ಸಾಕಷ್ಟು ರೀಸರ್ಚ್ ಮಾಡಿ ಈ ಕಥೆ ರೆಡಿ ಮಾಡಿಕೊಂಡಿರುವೆ ಒಂದಿಷ್ಟು ಮಠಾಧೀಶರನ್ನು ಸಂಪರ್ಕಿಸಿದಾಗ ಅವರೆಲ್ಲ ಒಳ್ಳೆ ಪ್ರಯತ್ನ ಗೆದ್ದೇ ಗೆಲ್ತೀಯ ಎಂದು ಶುಭ ಹಾರೈಸಿದರು. 15 ದಿನ ಇದೆ ಫಾರಂ ಹೌಸ್‌ದಲ್ಲಿ ಶೂಟ್ ಮಾಡಿ ನಂತರ ಚಿಕ್ಕತದಮಂಗಲದಲ್ಲಿ ಚಿತ್ರೀಕರಣ ಮಾಡುತ್ತೇವೆ ಎಂದು ನಿರ್ದೇಶಕ ಕೆ.ವಸಂತಕುಮಾರ್ ತಿಳಿಸಿದರು.

ಚಿತ್ರದಲ್ಲಿ ನಾಯಕಿಯಾಗಿ ಮೈಸೂರು ಮೂಲದ ರಂಗಭೂಮಿ ಪ್ರತಿಭೆ ಪ್ರೇರಣಾ ನಟಿಸುತ್ತಿದ್ದಾರೆ, ಬಲರಾಜ್‌ವಾಡಿ ಊರ ಗೌಡನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ವಿಶಿಷ್ಟ ಪಾತ್ರದಲ್ಲಿ ಖ್ಯಾತ ಜನಪದ ದಿಗ್ಗಜ ಗುರುರಾಜ್ ಹೊಸಕೋಟೆ ಇವರೊಂದಿಗೆ ವೈಜನಾಥ ಬಿರಾದಾರ, ಶಂಕರ ನಾರಾಯಣ್, ಮೈಸೂರು ಬಸವರಾಜ್, ಬ್ಯಾಂಕ್



ಪ್ರಸಾದ, ಮನು, ಬುಲೆಟ್ ವಿನು, ವಿನಯ್, ಸನತ್, ಸಂದೀಪ್, ಮಹಾಲಿಂಗ್ ಹೂಗಾರ್, ಸೌಂದರ್ಯ, ನವನೀತ, ಮಮತಾ, ಮಂಜುಳಾ,ಧನಲಕ್ಷ್ಮೀ, ಸ್ವಾತಿ, ಪ್ರಿಯಾಂಕ್ ಮೊದಲಾದವರಿದ್ದಾರೆ.

ತಾಂತ್ರಿಕವರ್ಗದಲ್ಲಿ ಛಾಯಾಗ್ರಹಣ ಮುತ್ತುರಾಜ್ , ವಿ.ಮನೋಹರ್ ಸಂಗೀತ ಚಿತ್ರಕ್ಕಿದ್ದುನಾಲ್ಕುಗೀತೆಗಳಿಗೆ ರಾಗ ಸಂಯೋಜನೆ ಮಾಡಿದ್ದಾರೆ. ಸುರೇಶ್ ಗುಟ್ಟಹಳ್ಳಿ ನೃತ್ಯಸಂಯೋಜನೆ,ಚಂದ್ರುಬಂಡೆಸಾಹಸ,ಬಾಬುಖಾನ್ ಕಲಾ ನಿರ್ದೇಶನ, ಮೇಕಪ್ ರಾಜ್ , ವಸ್ತ್ರಾಲಂಕಾರ ಪಶುಪತಿ, ಸಂಕಲನ ಮುತ್ತುರಾಜ್ ಟಿ , ಪಿ.ಆರ್.ಓ ನಾಗೇಂದ್ರ, ಡಾ. ಪ್ರಭು.ಗಂಜಿಹಾಳ,ಡಾ.ವೀರೇಶ್ ಹಂಡಿಗಿ ,ಪ್ರಚಾರಕಲೆ ದೇವುಸಹ ನಿರ್ದೇಶನ ಕಾಳಿದಾಸ ಅವರದಿದ್ದು, ಸುಮಾರು 25 ವರ್ಷಗಳ ಸಿನಿ ಪ್ರಯಾಣದಲ್ಲಿ ಹಲವಾರು ನಿರ್ದೇಶಕರುಗಳ ಜೊತೆ ಕಾರ್ಯನಿರ್ವಹಿಸಿದ ಕೆ ವಸಂತಕುಮಾರ್ ಅವರು ಮೊದಲಸಲ ಚಿತ್ರ ನಿರ್ದೇಶನಕ್ಕಿಳಿದು ಅದೃಷ್ಟ ಪರೀಕ್ಷೆಗೆ ಹೊರಟಿದ್ದಾರೆ,

ವಕೀಲರಾದ ಎನ್ ಜಯರಾಮ್, ಕೆ. ವೆಂಕಟೇಶ್, ಕೆ.ಎನ್.ಮಂಜುನಾಥ,ಬಿ.ಚಿದಾನಂದಮೂರ್ತಿ,ಬಿ.ಎ .ರಮೇಶ್,ರವಿಕುಮಾರ್,ಎಂ.ಎಸ್.ಚಿನ್ಮಯಿ,ಶ್ರೀಮತಿ ಕುಸುಮಾ ವಸಂತಕುಮಾರ್‌ನಿರ್ಮಾಣ ಸಹಕಾರ ಅಶ್ವಥ್,ರಾಮಚಂದ್ರಪ್ಪ, ಮುನಿಕೃಷ್ಣಪ್ಪ, ಅನೀಸ್ ಉರ್ ರೆಹಮಾನ್, ಆನಂದ್,ಚಂದ್ರಶೇಖರ ಹಡಪದ , ನಿರ್ಮಾಣ ನಿರ್ವಹಣೆ ಡಾ.ಎಂ.ಶಿವಕುಮಾರ್ ಅವರದಿದೆ.

**ಡಾ.ಪ್ರಭು ಗಂಜಿಹಾಳ, ಮೊ-9448775346**

## "ಗ್ರ್ಯಾಂಡ್ ಮಾಸ್ಟರ್ ಖ್ಯಾತಿಯ ಆರ್ಯವರ್ಧನ್" ಕೋಟಿಗೆ ಈಗ-ಕರುನಾಡ ಸಿರಿ ಪ್ರಶಸ್ತಿ

**ಸಿಹಿ ಕಹಿ ಸುದ್ದಿ,**

**ರೋಣ :** ಮೂರ್ತಿ ಚಿಕ್ಕದಾದರು ಕೀರ್ತಿ ದೊಡ್ಡದು ಎನ್ನುವಂತೆ ಈ 4 ವರ್ಷದ ಪೋರ "ಆರ್ಯವರ್ದನ್ ಕೋಟಿ" ಇವನ ಅತ್ಯದ್ಭುತ ಜ್ಞಾಪಕ ಶಕ್ತಿಯನ್ನು ಮೆಚ್ಚಿ ಇಂಡಿ-ಯಾ ಬುಕ್ ಆಫ್ ರೇಕಾರ್ಡನವರು ಇಂಡಿ-ಯಾ ಬುಕ್ ಆಫ್ ರೇಕಾರ್ಡ್ ಪುಸ್ತಕದಲ್ಲಿ ಹೆಸರನ್ನು ದಾಖಲಿಸಿ ಕೊಂಡಿದ್ದು, ಇದರ ಜೊತೆಗೆ ವರ್ಲ್ಡ್ ಯೂನಿವರ್ಸಿಟಿ ಯಿಂದ ಗ್ರ್ಯಾಂಡ್ ಮಾಸ್ಟರ್ ಎಂದು ಅವಾರ್ಡ್ ಪಡೆದು ರಾಜ್ಯದ ಜನರ ಗಮನ ಸೆಳೆದು ಸಾಧನೆ ಮಾಡಿದ್ದಾನೆ.

ತಾಲೂಕಿನಹೊಳೆಆಲೂರುಗ್ರಾಮದವರಾದ ಕನ್ನಡ ಭಾಷಾ ಶಿಕ್ಷಕಿ ಮಂಜುಳಾ ಒಣರೊಟ್ಟಿ ಹಾಗೂ ಪ್ರಕಾಶ ಕೋಟಿ ಅವರ ಸುಪುತ್ರ ಆರ್ಯವರ್ಧನ್ ಕೋಟಿ ಎಂಬ ಬಾಲಕನು ನವಲಗುಂದ ಶ್ರೀ ಕೃಷ್ಣ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಎಲ್.ಕೆ.ಜಿ ವಿಭಾಗದಲ್ಲಿ ಓದುತ್ತಿದ್ದು, ಈ ಪೋರನ ಸಾಧನೆಯನ್ನು ಗುರುತಿಸಿ, ರಾಣಿಬೆನ್ನೂರಿನಲ್ಲಿ 69 ನೇ. ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸ್ವಾಭಿಮಾನಿ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ "ಕರುನಾಡು ಸಿರಿ" ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಕರ್ನಾಟಕದಲ್ಲಿಯೇ ಅತ್ಯಂತ ಕಿರಿಯ ವಯಸ್ಸಿನಲ್ಲಿ ಕರ್ನಾಟಕದ 224 ವಿಧಾನ ಸಭಾ ಕ್ಷೇತ್ರಗಳ ಹೆಸರುಗಳನ್ನು ಎಂ.ಎಲ್.ಎ ಕ್ಷೇತ್ರಗಳು ಕೇವಲ ನಾಲ್ಕು ವರ್ಷದ ಪುಟ್ಟ ಪೋರನಿಂದ. ನರೇಂದ್ರ ಮೋದಿಜಿ ಅವರ ಕ್ಯಾಬಿನೆಟ್ ಸಚಿವರ ಹೆಸರು ಮತ್ತು ಖಾತೆ, ಸಿದ್ದರಾಮಯ್ಯಅವರಕ್ಯಾಬಿನೆಟ್‌ಮಂತ್ರಿಗಳ ಹೆಸರು ಮತ್ತು ಖಾತೆ. ಕರ್ನಾಟಕದ ಮುಖ್ಯಮಂತ್ರಿಗಳ ಹೆಸರು ಅನುಕ್ರಮವಾಗಿ 1947 ರಿಂದ 2024 ರ ವರೆಗೆ. ಭಾರತದ ಪ್ರಧಾನ ಮಂತ್ರಿಗಳ ಹೆಸರುಗಳು,1947






ರಿಂದ 2024 ರ ವರೆಗೆ. ಜ್ಞಾನಪೀಠ ಪ್ರಶಸ್ತಿ ಕರ್ನಾಟಕ ರತ್ನ ಪ್ರಶಸ್ತಿ, ಭಾರತ ರತ್ನ ಪ್ರಶಸ್ತಿ, ಪಂಪ ಪ್ರಶಸ್ತಿ, ನೋಬೆಲ್ ಪ್ರಶಸ್ತಿ, ಕರ್ನಾಟಕದ ಎಲ್ಲಾ ಜಿಲ್ಲೆಗಳು ಭಾರತದ 29 ರಾಜ್ಯಗಳು ಮತ್ತು ರಾಜಧಾನಿಗಳ ಹೆಸರು, ಭಾರತ ಸೇನಾ ಪ್ರಶಸ್ತಿಗಳು, ಭಗವದ್ಗೀತೆ 18 ಅಧ್ಯಾಯಗಳು, ಪುರ 18 ಪುರಾಣಗಳು, 27 ನಕ್ಷತ್ರಗಳು, 15 ತಿಥಿಗಳು, ಮಣ್ಣಿನ ಪ್ರಕಾರಗಳು, ಭೂಕಂಪನ ದಾಖಲಾತಿ ಕೇಂದ್ರಗಳು ಕಲ್ಲಿದ್ದಲಿನ ವಿಧಗಳು,ವೇದಗಳು ಭಾರತದೊಂದಿಗೆ ಗಡಿ ಹಂಚಿ ಕೊಂಡ ರಾಷ್ಟ್ರಗಳು ರೈಲ್ವೆ ಗೇಜ್ಗಳು ವಿಶ್ವ ಸಂಸ್ಥೆಯ ಅಧಿಕೃತ ಭಾಷೆಗಳು, ಕರ್ನಾಟಕ ದಲ್ಲಿರುವ ಪೊಲೀಸ್ ವಲಯಗಳು, ಕರ್ನಾಟಕ ಜಿಲ್ಲೆಗಳ ವಿಶೇಷ ಹೆಸರುಗಳು, ಕರ್ನಾಟಕ ಏಕೀಕರಣ ಮಹತ್ವವಾದ ಮಾಹಿತಿಗಳು, ಕರ್ನಾಟಕದೊಂದಿಗೆ ಗಡಿ ಹಂಚಿ ಕೊಂಡ ಜಿಲ್ಲೆಗಳು, ಜಿ ಸೆವೆನ್ ರಾಷ್ಟ್ರಗಳು, ಡಾ, ಪುನೀತ್ ರಾಜಕುಮಾರ್ ನಾಯಕ ನಟನಾಗಿ ನಟಿಸಿರುವ 31 ಚಲನ ಚಿತ್ರಗಳು ಡಾಕ್ಟರ್, ರಾಜಕುಮಾರ್ ನಟಿಸಿರುವ 206 ಚಲನ ಚಿತ್ರಗಳ ಹೆಸರುಗಳು, ದೇಶದ ಕರೆನ್ಸಿ, ಅಯೋಧ್ಯೆ ರಾಮ ಮಂದಿರ, ಸಾಮಾಜಿಕ ಜಾಲತಾಣ ಪಿತಾಮಹರು, ವಚನಕಾರರ ಅಂಕಿತನಾಮ, ಸ್ವತಂತ್ರ ಹೋರಾಟಗಾರರು ಘೋಷ ವಾಕ್ಯಗಳು, ರಾಷ್ಟ್ರೀಯ ಲಾಂಛನ, ಪ್ರಪ್ರಥಮ ಮಹಿಳಾ ಸಾಧಕೀಯರು, ಕವಿಗಳ ಬಿರುದುಗಳು, ವಿವಿಧ ರಾಷ್ಟ್ರೀಯ ಹೂಗಳು, ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಹೆಸರುಗಳು, ಸಮ್ ಇಂಪಾರ್ಟೆಂಟ್ ಫುಲ್ ಫಾರ್ಮ್ಸ್ ರಾಜ್ಯ ವಿಶೇಷಗಳು, ಗ್ರಹಗಳು ಖಂಡಗಳು ಮೇಲಿನ ಇವೆಲ್ಲವನ್ನೂ ಕುರಿತು 2500 ಕ್ಕೂ ಹೆಚ್ಚು ಜಿ.ಕೆ ಪ್ರಶ್ನೆಗಳಿಗೆ ಪಟ ಪಟನೆ ಉತ್ತರಿಸುತ್ತಾನೆ ಈ ಪೋರ.

ಆರ್ಯವರ್ಧನ್ ಕೋಟಿ ಈ ಪೋರನ ಜ್ಞಾಪಕ ಶಕ್ತಿ ಹಾಗೂ ಅವನ ಬುದ್ಧಿವಂತಿಕೆಯನ್ನು ಪರೀಕ್ಷಿಸಲು ARYAVARDHAN KOTI YOUTUBE CHANNELನ್ನು ವಿಕ್ಷೀಸಿ.

ಈತನ ಅತ್ಯದ್ಭುತ ಜ್ಞಾಪಕ ಶಕ್ತಿಯನ್ನು ಮೆಚ್ಚಿ ಇಂಡಿಯಾ ಬುಕ್ ಆಪ್ ರೆಕಾರ್ಡ್'ನವರು ಇಂಡಿಯಾಬುಕ್‌ಆಪ್‌ರೆಕಾರ್ಡ್‌ಪುಸ್ತಕದಲ್ಲಿ ಹೆಸರನ್ನ ದಾಖಲಿಸಿದ್ದಾರೆ. ಇದರ ಜೊತೆಗೆ ವರ್ಲ್ಡ್ ರೇಕಾರ್ಡ ಯುನಿವರ್ಸಿಟಿಯವರು "ಗ್ರ್ಯಾಂಡ್ ಮಾಸ್ಟರ್" ಎಂಬ ಅವಾರ್ಡನ್ನು ನೀಡಿದ್ದಾರೆ. ಜೊತೆಗೆ ನನ್ನ ಮಗನಲ್ಲಿರುವ ಪ್ರತಿಭೆಯನ್ನು ಗುರುತಿಸಿ ಹಲವು ಸಂಘ-ಸಂಸ್ಥೆಗಳು,ಗಣ್ಯ ವ್ಯಕ್ತಿಗಳು ಇವರ ಪ್ರತಿಭೆ ಗುರುತಿ ಸನ್ಮಾನಿಸಿ ಸತ್ಕರಿಸಿವೆ. ಮುಂದೆಯೂ ದೊಡ್ಡ ಸಾಧನೆ ಮಾಡಬೇಕು ಎಂದು ಶುಭ ಹಾರೈಸಿದ್ದಾರೆ. **-ಪೋಷಕರು ಮಂಜುಳಾ ಒಣರೊಟ್ಟಿ ಹಾಗೂ ಪ್ರಕಾಶ ಕೋಟಿ.**

ಆರ್ಯವರ್ದನ ಕೋಟಿ ಎಂಬ ಮಹಾನ್ ಬಾಲಕ ಉತ್ತಮವಾದ ಬೌದ್ಧಿಕ ಪ್ರೌಢಿಮೆಯನ್ನು ಹೊಂದಿದ್ದಾನೆ. ಅನೇಕ ಪ್ರಚಲಿತ ಘಟನೆಗಳ ಬಗ್ಗೆ ಹಾಗೂ ಇಂದಿನ ಯುವ ಜನತೆ ನಾಚಿಸುವಂತಹ ಬುದ್ಧಿ ಶಕ್ತಿಯನ್ನು ಹೊಂದಿದ್ದಾನೆ. ಇಷ್ಟು ಕಡಿಮೆ ವಯಸ್ಸಿನಲ್ಲಿ ಇಂಥ ಜ್ಞಾನ ಹೊಂದಿರುವುದು ನಿಜಕ್ಕೂ ಅದ್ಭುತ. ಇಂತಹ ಮಗುವಿಗೆ ಜನ್ಮ ಕೊಟ್ಟ ತಂದೆ ತಾಯಿಗಳು ನಿಜಕ್ಕೂ ಭಾಗ್ಯ ಶಾಲಿಗಳು ಅವನಿಗೆ ಮುಂದಿನ ದಿನ ಮಾನಗಳಲ್ಲಿ ಉತ್ತಮವಾದ ಸ್ಥಾನ ಮಾನಗಳು ಸಿಗಲಿ ಎಂದು ಆಶಿಸುತ್ತೇವೆ.

**-ಎಸ್.ವಿ.ಸಂಕನಗೌಡ್ರ ಕೆ.ಎಸ್.ಎಸ್. ಕಾಲೇಜು ಉಪನ್ಯಾಸಕರು.**

ಗ್ರ್ಯಾಂಡ್ ಮಾಸ್ಟರ್ ಆರ್ಯವರ್ಧನ್ ಕೋಟಿ ಚಿಕ್ಕ ವಯಸ್ಸಿನಲ್ಲಿ ಒಳ್ಳೆಯ ಬುದ್ಧಿ ಜಾಣತನ ದೇವರು ಕೊಟ್ಟ ವರ ಆಗಿದೆ. ಈ ಬಾಲಕನ ಸಾಧನೆಗೆ ತಂದೆ ತಾಯಿಯ ಪರಿಶ್ರಮ ಬಹಳ ಇದೆ.

ಮುಂದೆಯೂ ದೊಡ್ಡ ಸಾಧನೆ ಮಾಡಬೇಕು ಎಂಬ ಗುರಿಯನ್ನು ಹೊಂದಿರುವ ಬಾಲಕನಿಗೆ ಶುಭವಾಗಲಿ ಎಂದು ಶುಭ ಹಾರೈಸಿದರು.

**-ಸೋಮಯ್ಯ ದೊಡ್ಡಮನಿ ನಿವೃತ್ತ ಕಾಲೇಜು ಉಪನ್ಯಾಸಕರು(ಧಾರವಾಡ ಆಕಾಶವಾಣಿ ಕಲಾವಿದರು)**

## ಅಪಘಾತ ವಿಮೆ ಸಾಮಾಜಿಕ ಭದ್ರತೆಗೆ ಸಹಕಾರಿ: ಸಿದ್ದು ಸವದಿ



**ರಬಕವಿ-ಬನಹಟ್ಟಿ :** ಕೇಂದ್ರ ಸರ್ಕಾರ ಘೋಷಿಸಿದ ಪ್ರಧಾನಮಂತ್ರಿ ಸುರಕ್ಷಾ ವಿಮಾ ಯೋಜನೆಯು ಸಾಮಾಜಿಕ ಭದ್ರತೆಯನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದು, ಅದರಂತೆ ಜೀವನ್ ಜ್ಯೋತಿ ಹಾಗು ಅಟಲ್ ಪಿಂಚಣಿ ಯೋಜನೆಯೂ ಸೇರಿವೆ ಎಂದು ತೇರದಾಳ ಶಾಸಕ ಸಿದ್ದು ಸವದಿ ಹೇಳಿದರು.

ಸಮೀಪದ ಜಗದಾಳ ಗ್ರಾಮದ ಪಿ.ಕೆ.ಪಿ.ಎಸ್. ಸೊಸೈಟಿಯಲ್ಲಿ ಅಪಘಾತದಲ್ಲಿ ಮರಣ ಹೊಂದಿದ ಕುಟುಂಬಕ್ಕೆ ಎರಡು ಲಕ್ಷ ರೂ.ಗಳ ಸಹಾಯ ಚೆಕ್ ವಿತರಿಸಿ ಮಾತನಾಡಿದ ಅವರು,ಸಹಕಾರಿ ಸಂಘಗಳಲ್ಲಿ ಶೇರುದಾರರಾಗಿರುವ ಸದಸ್ಯರು ಅಪಘಾತದ ಸಾವು ಮತ್ತು ಶಾಶ್ವತ ಒಟ್ಟು ಅಂಗ ವೈಕಲ್ಯಕ್ಕೆ ಎರಡು ಲಕ್ಷ ರೂ. ಹಾಗು ಶಾಶ್ವತ ಭಾಗಶಃ ಅಂಗವೈಕಲ್ಯಕ್ಕೆ ಒಂದು ಲಕ್ಷ ರೂ.ಗಳ ಪರಿಹಾರವಿದೆ ಎಂದರು.

ಒಂದು ಅಥವಾ ಬೇರೆ ಬ್ಯಾಂಕ್ಗಳಲ್ಲಿ ಬಹುಬ್ಯಾಂಕ್ ಖಾತೆಗಳನ್ನು ಹೊಂದಿದ್ದರೆ, ನಂತರ ನೀವು ಒಂದು ಬ್ಯಾಂಕ್ ಖಾತೆಯ ಮೂಲಕ ಮಾತ್ರ ಯೋಜನೆಗೆ ಸೇರಲು ಅರ್ಹರಾಗಿದ್ದು, ವರ್ಷಕ್ಕೆ ಹನ್ನೆರಡು ರೂ. ಕಂತು ಇದಾಗಿದ್ದು , ನಿರ್ಲಕ್ಷ್ಯವಹಿಸದೆ ಈ ಯೋಜನೆಯ ಪ್ರಯೋಜನ ಎಲ್ಲರೂ ಪಡೆಯಬೇಕೆಂದರು.

ಅಂತ್ಯಸಂಸ್ಕಾರಕ್ಕೆ ಸಹಾಯ: ಸಂಘದ ಶೇರುದಾರ ನಿಧನ ಹೊಂದಿದ್ದಲ್ಲಿ ಅಂತ್ಯಸಂಸ್ಕಾರಕ್ಕೆಂದು ಐದು ಸಾವಿರ ರೂ. ಗಳ ಸಹಾಯ ಧನವನ್ನಾಗಿ ನೀಡಲು ಸಭೆ ತೀರ್ಮಾನಿಸಲಾಗಿದೆ ಎಂದು ಅಧ್ಯಕ್ಷ ಸುಭಾಸ ಉಳ್ಳಾಗಡ್ಡಿ ತಿಳಿಸಿದರು.

ಸೊಸೈಟಿ ಅಧ್ಯಕ್ಷ ಸುಭಾಸ ಉಳ್ಳಾಗಡ್ಡಿ, ಭೀಮಪ್ಪ ವಾಲಿಕಾರ (ತಳವಾರ) ಬಾಳಪ್ಪ ದಡ್ಡಿಮನಿ, ಬಿ. ಎಂ. ಹೊಸೂರ, ಬಸಪ್ಪ ನೀಲಕಂಠ, ಕೃಷ್ಣಪ್ಪ ಉಪ್ಪಾರ, ಗಂಗಪ್ಪ ಉಳ್ಳಾಗಡ್ಡಿ, ಕಾಶವ್ವ ಬಂಗಿ, ವೆಂಕವ್ವ ಚಿಂಚಲಿ, ಪರಶುರಾಮ ಬಸವ್ವಗೋಳ, ಶಿವಾಜಿ ಸೋರಗಾಂವಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಜುಡೋ: ಮಿನಿ ಓಲಂಪಿಕ್‌ನಲ್ಲಿ ಬನಹಟ್ಟಿ ಸಾಧನೆ



**ರಬಕವಿ-ಬನಹಟ್ಟಿ :** ಈಚೆಗೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ರಾಜ್ಯ ಸರ್ಕಾರದಿಂದ ಜರುಗಿದ ಮಿನಿ ಓಲಂಪಿಕ್ನ ಜುಡೋ ಸ್ಪರ್ಧೆಯಲ್ಲಿ ಬಾಗಲಕೋಟೆ ಜಿಲ್ಲಾ ಅಶೋಸಿಯೇಶನ್ನಿಂದ ಬನಹಟ್ಟಿಯ ಸೋಮವಾರ ಪೇಟೆ ಸಮಸ್ತ ದೈವ ಮಂಡಳಿಯ ಗರಡಿ ಮನೆಯಿಂದ ತೆರಳಿದ್ದ ಏಳು ಜನ ಕ್ರೀಡಾಪಟುಗಳಲ್ಲಿ ಮೂವರು ವಿಶೇಷ ಸಾಧನೆ ಮಾಡುವ ಮೂಲಕ ಬನಹಟ್ಟಿ ಪಟ್ಟಣದ ಕೀರ್ತಿ ಹೆಚ್ಚಿಸಿದ್ದಾರೆ.

ಆದಿತ್ಯಹಟ್ಟಿಪಾಟೀಲ(60ಕೆಜಿ)ಪ್ರಥಮಸ್ಥಾನದೊಂದಿಗೆಬಂಗಾರದಪದಕ ಪಡೆದಿದ್ದರೆ, ಪ್ರಭಿತ ಅಜ್ಜಪ್ಪಗೋಳ (66 + ಕೆಜಿ) ಹಾಗು ಸದಾಶಿವ ತುಂಗಳ (25 ಕೆಜಿ) ತೃತಿಯ ಸ್ಥಾನದೊಂದಿಗೆ ಕಂಚಿನ ಪದಕ ಪಡೆದುಕೊಂಡಿದ್ದಾರೆ. ಇವರ ಸಾಧನೆಗೆ ಗರಡಿ ಮನೆಯ ಕಾಡಪ್ಪ ಜಿಡ್ಡಿಮನಿ, ರಮೇಶ ಜಿಡ್ಡಿಮನಿ ಹಾಗೂ ದೈವ ಮಂಡಳಿಯ ಸಮಸ್ತ ಹಿರಿಯರು ಹರ್ಷ ವ್ಯಕ್ತಪಡಿಸಿದ್ದಾರೆ.

## ಕನಕದಾಸರ ಆದರ್ಶ ಪ್ರತಿಯೊಬ್ಬರಿಗೆ ಮಾದರಿ ಪ್ರಭು ಶ್ರೀ



**ಚಿಮ್ಮಡ :** ಕನಕದಾಸರು ಕನ್ನಡ ಭಾಷೆಯ ಪ್ರಸಿದ್ಧ ಕೀರ್ತನಕಾರರು, ಹರಿದಾಸರಾಗಿದ್ದರು. ಜಗತ್ತಿನ ಭೇದ ಭಾವ ತೊಲಗಿಸಲು ಶ್ರಮಿಸಿದ ಅವರ ತತ್ವ ಆದರ್ಶಗಳು ಪ್ರತಿಯೊಬ್ಬರಿಗೆ ಮಾದರಿಯಾಗಿವೆ ಎಂದು ಸ್ಥಳಿಯ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳು ಹೇಳಿದರು.

ಗ್ರಾಮದ ಕನಕದಾಸ ವೃತ್ತದಲ್ಲಿ ಹಾಲುಮತ ಸಮಾಜ ಬಾಂಧವರಿಂದ ಸೋಮವಾರ ಹಮ್ಮಿಕೊಳ್ಳಲಾಗಿದ್ದ ಕನಕದಾಸರ 537 ನೇ ಜಯಂತಿ ಕಾರ್ಯಕ್ರಮದ ಸಾನಿಧ್ಯವಹಿಸಿ ಮಾತನಾಡಿದ ಅವರು ಸಂತರು, ಮಹಾಪುರುಷರ ಆದರ್ಶಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಕನಕದಾಸರು ನಮ್ಮ ನಾಡು ಕಂಡ ಶ್ರೇಷ್ಠ ದಾಸರಲ್ಲಿ ಒಬ್ಬರಾಗಿದ್ದಾರೆ. ಅವರ ಅಚಲ ಭಕ್ತಿ ಮತ್ತು ವೈರಾಗ್ಯ ಮನೋಭಾವನೆಯು ಸರ್ವಕಾಲಕ್ಕೂ ಮಾದರಿಯಾಗಿದೆ. ವರ್ಷಕೊಮ್ಮೆ ಅವರ ಜಯಂತಿ ಆಚರಣೆಗೆ ಮಾತ್ರ ಸೀಮಿತಗೊಳಿಸದೆ, ಕನಕದಾಸರ ಜೀವನದ ತತ್ವ-ಆದರ್ಶಗಳನ್ನು ನಮ್ಮ ಜೀವನದಲ್ಲಿ ಸದಾಕಾಲವೂ ಅಳವಡಿಸಿಕೊಂಡಾಗ ಮಾತ್ರ ಜಯಂತಿ ಆಚರಣೆಗಳು ಸಾರ್ಥಕವಾಗುತ್ತವೆ ಎಂದರು.

ಗ್ರಾಮದ ಕನಕದಾಸ ವೃತ್ತದಲ್ಲಿ ಶ್ರೀಗಳಿಂದ ಕನಕದಾಸರ ಭಾವ ಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಜಯಂತ್ಯೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಇದೇ ಸಂದರ್ಭದಲ್ಲಿ ಸಾರ್ವಜನಕರಿಗೆ ಮಜ್ಜಿಗೆ ಹಾಗೂ ಉಪಹಾರದ ವ್ಯವಸ್ಥೆ ಕೈಗೊಳ್ಳಲಾಗಿತ್ತು.

ಸಮಾರಂಭದಲ್ಲಿ ಹಾಲುಮತ ಸಮಾಜದ ಪರಪ್ಪ ಮುಂದಿನಮನಿ, ತಾಲೂಕು ಪಂಚಾಯತ್ ಮಾಜಿ ಉಪಾಧ್ಯಕ್ಷ ಪ್ರಭು ಮುಧೋಳ, ಗ್ರಾಮ ಪಂಚಾಯತ್ ಸದಸ್ಯ ಮಹಾಲಿಂಗ ಮಾಯನ್ನವರ, ರುದ್ರಪ್ಪಾ ಹಳಮನಿ, ಸಿದ್ದು ಯಮಗರಣಿ, ವಿಠ್ಠಲ ತಿಮ್ಮಾಪೂರ, ಪ್ರಭು ಗೋವಿಂದಗೋಳ, ಪತ್ರಕರ್ತ ಇಲಾಹಿ ಜಮಖಂಡಿ, ಪೋಲಿಸ್ ಸಿಬ್ಬಂದಿ ಬಸವರಾಜ ಹುನ್ನೂರ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

# ವಿಪ್ರರಿಂದ ಅದ್ದೂರಿ ಕನಕ ಜಯಂತಿ ಆಚರಣೆ

**ಬಾಗಲಕೋಟೆ :** ಸಂಪೂರ್ಣ ಹರಿಭಕ್ತಸಾರ ಸತತಮೂರುದಿನಗಳವರೆಗೆಪಾರಾಯಣ.... ಕನಕದಾಸರ ಕೀರ್ತನೆಗಳಿಗೆ ಅನುವಾದ.. ಅಲ್ಲದೇ ಪ್ರವಚನ ದೀಪೋತ್ಸವ ಮೊದಲಾದ ಕಾರ್ಯಕ್ರಮಗಳಿಂದ ನವನಗರದ ವೆಂಕಟೇಶ ದೇವಸ್ಥಾನ ಸೋಮವಾರ ಸಂಜೆ ಕನಕಭೂಷಿತವಾಗಿ ಕಂಡಿತು. ದಾಸರ ಹಾಡುಗಳು ರಿಂಗಣಿಸಿದವು.



ಗೋವಿಪ್ರಪುಂಜ ಪ್ರತಿಷ್ಠಾನ ಮೊದಲಬಾರಿಗೆ ಕನಕದಾಸರ ಜಯಂತ್ಯುತ್ಸವವನ್ನು ಮೂರು ದಿನಗಳಿಂದ ಅದ್ದೂರಿಯಾಗಿ ಆಯೋಜನೆ ಮಾಡಿತ್ತು.

ವೆಂಕಟೇಶ ದೇವಸ್ಥಾನದ ಆವರಣದಲ್ಲಿ ನಡೆದ ದೀಪೋತ್ಸವದಲ್ಲಿ ಆದಿಕೇಶವ ಎಂದು ಹಣತೆಗಳನ್ನು ಜೋಡಿಸಿಟ್ಟು ದೀಪಗಳನ್ನು ಬೆಳಗಿಸಿದ್ದು, ಆಕರ್ಷಕವಾಗಿದ್ದು ಎಲ್ಲರ ಗಮನ ಸೆಳೆಯಿತು.

ಮಧುಮತಿ ಜೋಶಿ, ನೀರಜಾ ಕುಲಕರ್ಣಿ, ವೀಣಾ ಕುಲಕರ್ಣಿ ಇವರು ಕನಕದಾಸರ ಕೀರ್ತನೆಗಳನ್ನು ಪದ ಪದಾರ್ಥಗಳ ಒಳಗೊಂಡಂತೆ ಅನ್ವಯಗೊಳಿಸಿದರು.

ಪಂ. ಭೀಮಸೇನಾಚಾರ್ಯ ಪಾಂಡುರಂಗಿ ಮಾತನಾಡಿ, ಕನಕದಾಸರ ನಕ್ಷತ್ರ ಮಾಲಿಕಾ ಎಂಬ ಮುಂಡಿಗೆಯನ್ನು ಬಿಡಿಸಿ ರೋಚಕತೆಯನ್ನು ಮೂಡಿಸಿದರಲ್ಲದೇ ಕನಕದಾಸರ ಚಮತ್ಕೃತಿ ಮತ್ತು ಶಬ್ದ ಚಮತ್ಕಾರ ಅಮೋಘವಾದದ್ದು,ಕನಕರ ಮುಂಡಿಗೆಗಳನ್ನು ಎಂಥೆಂಥ ಪಂಡಿತರಿಗೂ ಸವಾಲು ಎಸೆಯುತ್ತವೆ. ಕನಕದಾಸರ ಪದ ಲಾಲಿತ್ಯ ಜಿವ್ಹೆಯಲ್ಲಿ ಆಡುವದೇ ಚಂದ ಎಂದು ಬಣ್ಣಿಸಿದರು.

ಮುಖಂಡಶಶಿಕಾಂತಪೂಜಾರಿಮಾತನಾಡಿ, ಕನಕದಾಸರು ದಾಸ ಪರಂಪರೆಯನ್ನು ಶ್ರೀಮಂತಗೊಳಿಸಿದ ಅಪರೋಕ್ಷ ಜ್ಞಾನಿಗಳು. ಆದರೆ ಸಮಾಜದಲ್ಲಿಂದು ಇಂಥ ಮಹಾಪುರುಷರನ್ನು ಒಂದು ವರ್ಗಕ್ಕೆ ಸಮುದಾಯಕ್ಕೆ ಜಾತಿಗೆ ಸೀಮಿತ ಗೊಳಿಸುತ್ತಿರುವುದು ಖೇದನೀಯವಾಗಿದೆ. ಕನಕದಾಸರ ಕೀರ್ತನೆಗಳಲ್ಲಿ ಮೇಲು ಕೀಳುಗಳನ್ನು ಹುಡುಕುವದು ಪರಿಪಾಠವಾಗಿದೆ. ಆದರೆ ಅದು ತಪ್ಪಬೇಕು. ಭಕ್ತಿಯ ಪರಾಕಾಷ್ಠೆಯ ತಲುಪಿದವರು ಕನಕದಾಸರು. ತಮಗೆ ಸಿಕ್ಕ ಸಂಪತ್ತನ್ನೆ ವಿತರಿಸಿ ಹರಿದಾಸರಾಗುವದೆಂದರೆ ಸುಮ್ಮನೆ ಮಾತಲ್ಲ. ಆದರೆ ಅವರು ಹೇಳಿದ ತತ್ವಗಳಿಗೆ ವಿರುದ್ಧವಾದ ನಡೆ ಇಂದು ಸಮಾಜದಲ್ಲಿ ಕಾಣುತ್ತಿದ್ದೇವೆ ಇದು ದುರಂತ ವೆಂದು ವಿಷಾದ ವ್ಯಕ್ತಪಡಿಸಿದರಲ್ಲದೇ ಇಂಥ ಅಪೂರ್ವವಾದ ಕಾರ್ಯಕ್ರಮ ಆಯೋಜಿಸಿರುವ ಗೋವಿಪ್ರಪುಂಜ ಪ್ರತಿಷ್ಠಾನ ಮಾದರೀಯಾಗಿದೆ. ಅಲ್ಲದೇ ಗೌರವ ಪೂರ್ವಕವಾಗಿ ರಾಗಿಯನ್ನು ನೀಡಿ ಸನ್ಮಾನಗೊಳಿಸಿರುವುದು ಇನ್ನು ಅರ್ಥಪೂರ್ಣವಾಗಿಸಿದೆ ಎಂದರು.

ಮೂರುದಿನಪಂಬಿಂದುಮಾಧವಾಚಾರ್ಯ ನಾಗಸಂಪಗಿ ಅವರಿಂದ ದಾಸಶ್ರೇಷ್ಠ ಕನಕದಾಸರ ಕೃತಿ ಹರಿಭಕ್ತಸಾರದ ಪ್ರವಚನವನ್ನು ಸಾದರ ಪಡಿಸಿ, ಕನಕದಾಸರ ಭಕ್ತಿ ಉತ್ಕಟತೆ ಅನನ್ಯವಾದದ್ದು, ಹರಿಯಲ್ಲಿ ಮಾಡುವ ಭಕ್ತಿಯ ಪರಿಯನ್ನು ಹರಿಭಕ್ತಸಾರವನ್ನೇ ಓದಿ ಹಾಡಿ ಅನುಸರಿಸಬೇಕು ಎಂದು ಹೇಳಿದರು.

ಮೂರು ದಿನಗಳ ಕಾಲ ಹರೇ ಶ್ರೀನಿವಾಸ ಭಜನಾ ಮಂಡಳಿ, ರಾಘವೇಂದ್ರಸ್ವಾಮಿಗಳ ಭಜನಾ ಮಂಡಳಿಗಳು ಪಾಲ್ಗೊಂಡಿದ್ದು ಕನಕದಾಸರ ಕೀರ್ತನೆಗಳನ್ನು ಪ್ರಸ್ತುತ ಪಡಿಸಿದವು.

ಇದೇ ಸಂದರ್ಭದಲ್ಲಿ ಹರಿಕಥಾಮೃತ ಸಾರ ಮತ್ತು ಕನಕದಾಸರ ಹರಿಭಕ್ತಸಾರವನ್ನು ಕಂಠಸ್ಥ ಮಾಡಿಕೊಂಡ ಮೋಹಿನಿ ಗಾಂವಕರ ಅವರಿಗೆ ‘ಹರಿಗುಣಗಾಥೆ’ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಅಧ್ಯಕ್ಷತೆಯನ್ನು ವಸಂತ ಕೆ. ದೇಸಾಯಿ ವಹಿಸಿದ್ದರು. ಎಕೆಬಿಎಂಎಸ್ ಮಹಿಳಾ ಅಧ್ಯಕ್ಷೆ ವಿದುಷಿ ಶುಭದಾ ದೇಶಪಾಂಡೆ, ನಗರಸಭೆ ಅಧ್ಯಕ್ಷೆ ಸವಿತಾ ಲೆಂಕೆಣ್ಣವರ, ಎಕೆಬಿಎಂಎಸ್‌ನ ನರಸಿಂಹ ಆಲೂರು, ಪತ್ರಕರ್ತ ಸುಶೀಲೇಂದ್ರಕುಂದರಗಿ,ಇತರರು ಪಾಲ್ಗೊಂಡಿದ್ದರು. ಗೋವಿಪ್ರಪುಂಜದ ಪ್ರತಿಷ್ಠಾನದ ಧರ್ಮದರ್ಶಿ ನಾಗರಾಜ ಕುಲಕರ್ಣಿ ಸ್ವಾಗತಿಸಿದರು. ಕಮಲಾ ಕುಲಕರ್ಣಿ ನಿರೂಪಿಸಿದರು. ಗೋವಿಪ್ರಪುಂಜ ಪ್ರತಿಷ್ಠಾನದ ಧರ್ಮದರ್ಶಿ ವಿಠಲ ಕುಲಕರ್ಣಿ ವಂದಿಸಿದರು.

### ವಿಜಯಪುರ ನಗರದ ಮನಗೂಳಿ ಅಗಸಿಯ ಟ್ರಾಫಿಕ್ ಸಮಸ್ಯೆ..!!

## ರಸ್ತೆ ದಾಟಲು ವಾಹನ ಸವಾರರು ಪರದಾಟ

**ವರದಿ:ಲಾಲಸಾಬ ಸವಾರಗೋಳ**



**ವಿಜಯಪುರ :** ನಗರದಲ್ಲಿ ಇದ್ದೀರಿ ಅಂದರೆ ಮನಗೂಳಿ ಅಗಸಿ ದಾಟಿ ಒಂದಲ್ಲ ಒಂದು ಸಲ ಹೋಗಿಯೇ ಇರುತ್ತೀರಿ. ಮನಗೂಳಿ ಅಗಸಿಯಲ್ಲಿ ಉಂಟಾಗಿರುವ ಟ್ರಾಫಿಕ್ ಜಾಮಿನಲ್ಲಿ ಸಿಕ್ಕಾಗಿ ಕೊಂಡು ಒದ್ದಾಡಿದ ಪ್ರಸಂಗವು ಆಗಿಯೇ ಇರುತ್ತದೆ.

ವಿಷಯವೇನೆಂದರೆ ಇಲ್ಲಿ ಟ್ರಾಫಿಕ್ ಜಾಮ್ ಒಂದು ಗಂಭೀರ ಸಮಸ್ಯೆಯಾಗಿದ್ದು, ಇದರಿಂದಾಗಿ ಸಾರ್ವಜನಿಕರು ಹಾಗೂ ವಾಹನ ಸವಾರರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

ಐತಿಹಾಸಿಕಕೋಟೆಯಪ್ರವೇಶದ್ವಾರದಲ್ಲಿಉಂಟಾಗುವ ದಟ್ಟಣೆ, ಬೆಂಗಳೂರು ಹೆದ್ದಾರಿಯೊಂದಿಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಉಂಟಾಗುವ ಜಾಮ್, ತುರ್ತು ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗುವುದು ಇತ್ಯಾದಿ ಸಮಸ್ಯೆಗಳು ಗಂಭೀರ ಸ್ವರೂಪವನ್ನು ಪಡೆದುಕೊಂಡಿವೆ.

ಇಷ್ಟು ಟ್ರಾಫಿಕ್ ಸಮಸ್ಯೆ ಇದ್ದರೂ ಪೋಲೀಸ್ ಇಲಾಖೆ ಇಲ್ಲಿ ಸರಿಯಾಗಿ ಪೋಲೀಸ್ ಸಿಬ್ಬಂದಿ ನಿಯೋಜನೆ ಮಾಡುತ್ತಿಲ್ಲ. ಇಲ್ಲಿ ಒಮ್ಮುಖ ಸಂಚಾರಿ ಮಾರ್ಗ ಮಾಡದೇ ಎರಡೂ ಬದಿಯಲ್ಲಿ ಸಂಚಾರಕ್ಕೆ ಅವಕಾಶ ನೀಡಿದ್ದೇ ಸಮಸ್ಯೆಗೆ ಕಾರಣವಾಗಿದ್ದು, ಮನಗೂಳಿ ಅಗಸಿ ಹಾಗೂ ಬಾಗಲಕೋಟೆ ರಸ್ತೆ ಸಂಚಾರ ವಿಭಜಿಸಿದರೆ ಸಮಸ್ಯೆಗೆ ಪರಿಹಾರವಾಗುತ್ತದೆ ಎಂಬುದು ವಾಹನ ಸವಾರರ ಅಭಿಪ್ರಾಯವಾಗಿದೆ. ಮನಗೂಳಿ ಅಗಸಿ ಬಳಿ ಟ್ರಾಫಿಕ್ ಜಾಮ್ ಬಗ್ಗೆ ಸಾರ್ವಜನಿಕರ ಅಸಮಾಧಾನಗೊಂಡಿದ್ದು, ಈ ನಿಟ್ಟಿನಲ್ಲಿ ಸಂಚಾರಿ ಪೊಲೀಸ್ ಠಾಣೆಯ ಅಧಿಕಾರಿಗಳು ಗಮನಹರಿಸಬೇಕೆಂಬುದು ಜನರ ಒತ್ತಾಯವಾಗಿದೆ.

## ಸಾರ್ವಜನಿಕ ಸೌಲಭ್ಯ ಒದಗಿಸಿ: ಪುರಸಭೆಗೆ ದಾನಮ್ಮನಗರದ ನಿವಾಸಿಗಳ ಮನವಿ



**ಮಹಾಲಿಂಗಪುರ :** ಸ್ಥಳೀಯ ದಾನಮ್ಮದೇವಿ ನಗರದಲ್ಲಿ ಚರಂಡಿ ಸ್ವಚ್ಛತೆ,ಬೀದಿ ದೀಪಗಳ ನಿರ್ವಹಣೆ,ಉದ್ಯಾನ ನಿರ್ಮಾಣ ಹಾಗೂ ಇಲ್ಲಿಯ ರಬಕವಿ ಮುಖ್ಯ ರಸ್ತೆಯಿಂದ ಬುದ್ನಿಪಿಡಿಯಲ್ಲಿ ಹಾದು ಸೈದಾಪೂರ ರಸ್ತೆಗೆ ಕೂಡುವ ಉಪರಸ್ತೆಗೆ ಗಟಾರ ನೀರು ಸರಾಗವಾಗಿ ಹೋಗುವಂತೆ ಚರಂಡಿ ಮೇಲೆ ಸದೃಢ ಸಿಡಿ ಹಾಕಿ ಗಟ್ಟಿಗೊಳಿಸಬೇಕೆಂದು ಆಗ್ರಹಿಸಿರುವ ಅಲ್ಲಿಯ ನಿವಾಸಿಗಳು ಪುರಸಭೆ ಮುಖ್ಯಾಧಿಕಾರಿಗಳಿಗೆ ಬರೆದ ಮನವಿ ಪತ್ರವನ್ನು ಮಂಗಳವಾರ ಪುರಸಭೆ ವ್ಯವಸ್ಥಾಪಕ ಎಸ್. ಎನ್.ಪಾಟೀಲ ಹಾಗೂ ಅಭಿಯಂತರ ಎಸ್. ಎಂ.ಕಲಬುರ್ಗಿ ಅವರಿಗೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ನಿವಾಸಿಗಳು ಆದಷ್ಟು ಬೇಗ ಮೂಲಭೂತ ಸೌಲಭ್ಯಗಳ ಕುರಿತು ಗಮನ ಹರಿಸಲು ವಿನಂತಿಸಿದರು.ಇದಕ್ಕೆ ಪ್ರತಿಕ್ರಿಯೆ ನೀಡಿದ ಪುರಸಭೆ ಅಭಿಯಂತರ ಎಸ್. ಎಂ.ಕಲಬುರ್ಗಿ ಹಂತಹಂತವಾಗಿ ಕಾಮಗಾರಿಗಳನ್ನು ಕೈಗೊಳ್ಳಲಾಗುವದು ಎಂದು ಭರವಸೆ ನೀಡಿದರು.

ಪುರಸಭೆ ಆರೋಗ್ಯ ವಿಭಾಗದ ಮಹಾಲಿಂಗ ಮುಗಳಖೋಡ, ದಾನಮ್ಮದೇವಿ ನಗರದ ನಿವಾಸಿಗಳಾದ ಬಸಪ್ಪ ಬಡಿಗೇರ, ಚನ್ನಗಿರೆಪ್ಪ ಬನ್ನೂರ, ವಿನಯ ಬನ್ನೂರ, ಯವ್.ಬಿ.ಬೆನವಾಡಿ, ಪದಮಸಿಂಗ ದೈಹಿಯಾ, ಪ್ರೇಮಾರಾಮ ದೇವಾಸಿ, ಡಾ.ಎಸ್.ಎಂ.ಅರೆನಾಡ, ಬಸವರಾಜ ಪಟ್ಟಣಶೆಟ್ಟಿ, ಶಿವಾನಂದ ಮೆಳವಂಕಿ, ಬಸವರಾಜ ಕುಂಟೋಜಿ, ರಾಜು ಮುಗಳಖೋಡ, ಆರ್.ಎ.ಕೊಣ್ಣೂರ, ಎಸ್.ಎಸ್.ಶಿಪ್ರಿ, ವಿಜಯ ಕಲಾಲ, ಶಿವರಾಯ ಈಶ್ವರಪ್ಪಗೋಳ ಸೇರಿದಂತೆ ಹಲವರು ಇದ್ದರು.

## ರಕ್ತ ಸಂಬಂಧಕ್ಕಿಂತಲೂ ಮಿಗಿಲಾದದ್ದು ಸ್ನೇಹ ಸಂಬಂಧ: ಪ್ರಭು ಶ್ರೀ





**ಚಿಮ್ಮಡ :** ರಕ್ತ ಸಂಬಂಧಗಿಂತಲೂ ಮಿಗಿಲಾದದ್ದು ಸ್ನೇಹ ಸಂಬಂಧ. ಇಂದು ಸಾಂದರ್ಭಿಕವಾಗಿ ದೂರವಾಗಿರುವ ಆತ್ಮೀಯ ಸಂಬಂಧಗಳನ್ನು ಸ್ನೇಹ ಸಮ್ಮಿಲನದಂತಹ ಕಾರ್ಯಕ್ರಮಗಳು ಬೆಸೆಯಲು ಸೇತುವೆಯಾಗಿವೆ' ಎಂದು ಚಿಮ್ಮಡ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳು ಹೇಳಿದರು.

ಗ್ರಾಮದ ವಿರಕ್ತಮಠದ ಪರಿಸರ ಕುಟೀರ ಆಶ್ರಮದಲ್ಲಿ ಮಹಾಲಿಂಗಪುರದ ಎಸ್ಪಿಪಿ ಪ್ರೌಢಶಾಲೆಯ 1986–87 ನೇ ಸಾಲಿನ ವಿದ್ಯಾರ್ಥಿಗಳು ಭಾನುವಾರ ಹಮ್ಮಿಕೊಂಡ ಸ್ನೇಹ ಸಮ್ಮಿಲನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಇಂದಿನ ಯಾಂತ್ರೀಕೃತ ಬದುಕಿನಲ್ಲಿ ರಕ್ತ ಸಂಬಂಧಗಳ ಮಧ್ಯೆ ಕಾಲ ಕಳೆಯಲು ಸಾಧ್ಯವಾಗದೆ ಮೊಬೈಲ್ನೊಂದಿಗೆ ಕಾಲ ಕಳೆಯುವಂತಾಗಿರುವುದು ವಿಪರ್ಯಾಸ. ಕೆಲವು ಸಮಯವನ್ನಾದರೂ ಮೀಸಲಿಟ್ಟು ಕುಟುಂಬ ಹಾಗೂ ಸಂಬಂಧಗಳಿಗೆ ಸಮಯ ಕೊಡಬೇಕಿದೆ' ಎಂದರು.

ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಮಹಾಂತೇಶ ಹಿಟ್ಟಿನಮಠ, ಶ್ರೀಕಾಂತ ಮಾಳಿ, ಶುಭಾಂಗಿಣಿ ಇಂಡಿಕರ, ಮಹಾನಂದಾ ಗೊಂಬಿ, ಹನಮಂತ ಶಿರೋಳ, ಪ್ರಭು ನೇಸೂರ, ಶಿವಲಿಂಗ ಟಿರಕಿ ಮಾತನಾಡಿದರು. ಮನೋಹರ ಶಿರೋಳ, ಶಿವಾನಂದ ಬಾಗೇವಾಡಿ, ಪಾರ್ವತಿ ಸೋರಗಾಂವಿ, ಶಂಕರ ಹೊಸಕೋಟಿ, ವಿವೇಕಾನಂದ ಕಡಪಟ್ಟಿ ಸೇರಿದಂತೆ ಹಲವಾರು ಜನ ಪ್ರಮುಖರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಶ್ರೀ ಪ್ರಭು ಮಹಾಸ್ವಾಮಿಗಳು ಶ್ರೀಮಠದ ಪರವಾಗಿ ಮಹಿಳಾ ಸಹಪಾಠಿಗಳಿಗೆ ತವರಿನ ಕಾಣಿಕೆಯಾಗಿ ಹಸಿರು ಸೀರೆ, ಅರಿಷಿಣ ಕುಂಕುಮದ ಬಾಗಿನ ನೀಡಿ ಗೌರವಿಸಿದರು. ಹಲವು ಸಾಧಕರನ್ನು ಸತ್ಕರಿಸಲಾಯಿತು. ಶಿಲ್ಪಾ ಗುಜ್ಜರ ಪ್ರಾರ್ಥಿಸಿದರು. ಶ್ರೀಕಾಂತ ಮಾಳಿ ಸೊಗಸಾಗಿ ನಿರೂಪಿಸಿ ವಂದಿಸಿದರು.

## ದೇಶದ ಪ್ರಗತಿಯಲ್ಲಿ ಯುವಕರ ಪಾತ್ರ ಮಹತ್ವದ್ದು: ಕೊಪ್ಪದ



**ಜಮಖಂಡಿ :** ದೇಶದ ಪ್ರಗ್ರತಿಯಲ್ಲಿ ವಿದ್ಯಾರ್ಥಿಗಳ ಪಾತ್ರ ಬಹಳ ಮಹತ್ವಾಗಿದೆ ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡುವದರೊಂದಿಗೆ ಯೋಗ್ಯವಾದ ವ್ಯಕ್ತಿಯನ್ನು ಅಯ್ಕೆ ಮಾಡಬೇಕು ಎಂದು ಹುನ್ನೂರಿನ ಸರಕಾರಿ ಪ.ಪೂ. ಕಾಲೇಜು ಉಪನ್ಯಾಸಕ ಎಂ.ಎಸ್.ಕೊಪ್ಪದ ಹೇಳಿದರು.

ತಾಲೂಕಿನ ಮಧುರಖಂಡಿ ಗ್ರಾಮದ ಬೀರಸಿದ್ದೇಶರ ದೇವಸ್ಥಾನದಲ್ಲಿ ಬಾಲಕರ ಸರಕಾರಿ ಪ.ಭಾ. ಪದವಿ ಪೂರ್ವ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಶಿಬಿರದಲ್ಲಿ ಮಾತನಾಡಿದರು.

ಡಾ. ಲಿಂಗಾನಂದ ಗವಿಮಠ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಶಿಬಿರಾಧಿಕಾರಿ ಐ.ಎಸ್.ಹೆಬ್ಬಾಳ, ಉಪನ್ಯಾಸಕ ಶ್ರೀಕಾಂತ ಮಾದರ ಐ.ಎಮ್. ಕರಡಿ, ಸುನೀಲ ಕೋರೆ, ಶಂಕರ ಸಂಗಾನಟ್ಟಿ ಕೆ.ಎಸ್. ಪೂಜಾರಿ ಸಹಿತ ಹಲವರು ಇದ್ದರು.

## ಕನಕದಾಸರು ಮನುಕುಲ ಉದ್ಧಾರಕರು: ಮಹಾಲಿಂಗಪ್ಪ ಜಕ್ಕನ್ನವರ



**ಮಹಾಲಿಂಗಪುರ :** ಕನಕದಾಸರು ಸಕಲ ಮನುಕುಲ ಉದ್ಧಾರಕರಾಗಿದ್ದರು. ಸಮಾನತೆ ಸಾರಿದ ಸಂತ ಜಗತ್ತಿನ ಮಹಾನ ಚೇತನ, ವಿಶ್ವಗುರು ದಾಸ ಶ್ರೇಷ್ಠ ದಾಸ ಪರಂಪರೆಯಲ್ಲಿ ಇವರು ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ ಎಂದು ಕನಕದಾಸ ಬ್ಯಾಂಕಿನ ಅಧ್ಯಕ್ಷ ಮಹಾಲಿಂಗಪ್ಪ ಜಕ್ಕನ್ನವರ ಹೇಳಿದರು.

ಪಟ್ಟಣದ ಕನಕದಾಸ ಬ್ಯಾಂಕಿನಲ್ಲಿ ನಡೆದ ಕನಕದಾಸರ 537ನೇ ಜಯಂತಿಯನ್ನು ಕನಕದಾಸರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು ಕನಕದಾಸರು ಜಾತಿ ವ್ಯವಸ್ಥೆಯನ್ನು ವಿರೋಸಿದರು ಕುಲ ಕುಲ ಎಂದು ಬಡಿದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ಎಂದವರು, ಮನುಜ ಕುಲದಲ್ಲಿ ಹುಟ್ಟಿ ಭಕ್ತಿಯಿಂದಲೇ ಪ್ರತ್ಯಕ್ಷ ದೇವರನ್ನು ಕಂಡವರು ಯಾರಾದರೂ ಇದ್ದರೇ ಅವರೇ ವಿಶ್ವ ಮಾನವ, ಭಕ್ತಶೇಷ್ಠ ಕನಕದಾಸರು ಎಂದರು.

ರಬಕವಿ ಬನಹಟ್ಟಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಪ್ಪಾ ಸಿಂಗಾಡಿ, ಸೈದಪೂರ ಗ್ರಾಪಂ ಮಾಜಿ ಅಧ್ಯಕ್ಷ ಮಹಾಲಿಂಗಪ್ಪ ಸನದಿ ಮಾತನಾಡಿದರು.

ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ, ಮುಖಂಡ ರಾಜೇಶ ಭಾವಿಕಟ್ಟಿ ಅವರನ್ನು ಸನ್ಮಾನಿಸಲಾಯಿತು.

ಬ್ಯಾಂಕಿನ ಉಪಾಧ್ಯಕ್ಷ ಶ್ರೀಶೈಲ ಕಳ್ಯಾಗೋಳ, ಮುಖ್ಯಕಾರ್ಯನಿರ್ವಾಹಕ ಪ್ರಭು ಹುಬ್ಬಳ್ಳಿ, ಪುರಸಭೆ ಮಾಜಿ ಅಧ್ಯಕ್ಷ ಜಿ.ಎಸ್.ಗೊಂಬಿ, ಸದಸ್ಯ ಶೇಖರ ಅಂಗಡಿ, ಬ್ಯಾಂಕಿನ ನಿರ್ದೇಶಕರಾದ ಭೀಮಶೆಪ್ಪ ಸಂಶಿ, ಪ್ರಕಾಶ ಸಣ್ಣಟ್ಟಿ, ಮಹಾಲಿಂಗಪ್ಪ ಲೋಕುರಿ, ವಿಠ್ಠಲ ಬನಾಜ, ಹಿರಿಯರಾದ ಚಂದ್ರಪ್ಪ ಡೋಣಿ,

ಲಕ್ಷ್ಮಣ ಕಿಶೋರಿ, ಶ್ರೀಶೈಲ ಕಾರಜೋಳ, ಸಿಬ್ಬಂದಿ ಮಹಾಲಿಂಗ ಹುಬ್ಬಳ್ಳಿ, ಚಂದ್ರು ಸಂಶಿ, ಶಂಕರ ಮೇಟಿ, ಮಲ್ಲಿಕಾರ್ಜುನ ಮೇಟಿ, ಮಹಾಲಿಂಗ ಮಾಳಿ, ಆನಂದ ಪೂಜೇರಿ, ನಿಶಾಂತ ಬಂಡಿ, ಶ್ರೀಶೈಲ ಅವಟಿ, ದಾನೇಶ ಹೂಗಾರ ಸೇರಿದಂತೆ ಹಲವರು ಇದ್ದರು.

## ಯಶವಂತ ಮಾದರ ಅವರಿಗೆ ಹೆಮ್ಮೆಯ ಕರ್ನಾಟಕ ರತ್ನ ಪ್ರಶಸ್ತಿ



**ಲೋಕಾಪುರ :** ಬೆಂಗಳೂರಿನ ಭಾರತ ಸ್ಕೌಟ್ಸ್ ಹಾಗೂ ಗೈಡ್ಸ್ ಅಡಿಟೋ–ರಿಯಂ ನಲ್ಲಿ ಸುವರ್ಣ ಕರ್ನಾಟಕ ಕಾರ್ಮಿಕ ವೇದಿಕೆಯಿಂದ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಕೊಡ ಮಾಡುವ ಹೆಮ್ಮೆಯ ಕರ್ನಾಟಕ ರತ್ನ ಪ್ರಶಸ್ತಿಯನ್ನು ಸಮೀಪದ ಚಿಕ್ಕೂರ ಗ್ರಾಮದ ಯಶವಂತ ಮಾದರ ಅವ–ರಿಗೆ ನೀಡಿ ಗೌರವಿಸಲಾಯಿತು.

ಈ ವೇಳೆ ಹಿರೇಮಠದ ಡಾ। ಚಂದ್ರಶೇಖರ ಶ್ರೀಗಳು, ಚಿತ್ರನಟಿ ಪ್ರೇಮಾ, ನಿರ್ದೇಶಕ ಪ್ರತಾಪಸಿಂಹ, ಸುವರ್ಣ ಕರ್ನಾಟಕ ಕಾರ್ಮಿಕ ವೇದಿಕೆ ಅಧ್ಯಕ್ಷ ಡಾ। ಹುಸೇನಸಾಬ ಕೆರೂರ, ನಟ ಅಂಜನ ದುಬೈ, ಉದ್ಯಮಿ ಶೇಖ್‌ಅಲಿ ಮುಂತಾದವರು ಇದ್ದರು.

## ಲೈನ್ ಮ್ಯಾನ್‌ಗಳಿಗೆ ವಿದ್ಯುತ್ ಸುರಕ್ಷತಾ ಜಾಗೃತಿ ಅರಿವು ತರಬೇತಿ ಕಾರ್ಯಾಗಾರ ಜೆಸ್ಕಾಂ ಸಿಬ್ಬಂದಿ ಸುರಕ್ಷತೆಯಿಂದ ಕಾರ್ಯನಿರ್ವಹಿಸಿ: ಜಿಲ್ಲಾಧಿಕಾರಿ ನಲಿನ್ ಅತುಲ್



**ಕೊಪ್ಪಳ :** ಜೆಸ್ಕಾಂ ಸಿಬ್ಬಂದಿಗಳು ವಿದ್ಯುತ್ ಕೆಲಸವನ್ನು ಮಾಡುವಾಗ ಅತ್ಯಂತ ಸುರಕ್ಷತೆಯಿಂದ ಕಾರ್ಯನಿರ್ವಹಿಸಿ ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

ಅವರು ಶನಿವಾರ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಕೊಪ್ಪಳ ಕಾರ್ಯ ಮತ್ತು ಪಾಲನಾ ವಿಭಾಗದಿಂದ ಹಮ್ಮಿಕೊಂಡಿದ್ದ ಮಾರ್ಗದಾಳು, ಸಹಾಯಕ ಮಾರ್ಗದಾಳು ಹಾಗೂ ಕಿರಿಯ ಮಾರ್ಗದಾಳುಗಳ ವಿದ್ಯುತ್ ಸುರಕ್ಷತಾ ಜಾಗೃತಿ ಅರಿವು ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಬಿಇ ಎಲೆಕ್ಟ್ರಾನಿಕ್ ಪದವಿ ಪಡೆದಿರುವ ನನಗೆ ವಿದ್ಯುತ್ ಸರಬರಾಜು ನಿಗಮದಲ್ಲಿ ಕಾರ್ಯನಿರ್ವಹಿಸಿರುವ ಅನುಭವವಿದೆ ಎಂದು ಜಿಲ್ಲಾಧಿಕಾರಿಗಳು ಹೇಳಿದರು. ಎಲ್ಲಾ ಮಾರ್ಗದಾಳುಗಳು ಕರ್ತವ್ಯದ ವೇಳೆಯಲ್ಲಿ ಕಡ್ಡಾಯವಾಗಿ ಸುರಕ್ಷತಾ ಉಪಕರಣ ಬಳಸಬೇಕು ಹಾಗೂ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಿ ವಿದ್ಯುತ್ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಯಾವುದೇ ವಿದ್ಯುತ್ ಅಪಘಾತಗಳು ನಡೆದಯದಂತೆ ಎಚ್ಚರಿಕೆಯಿಂದ ಕೆಲಸ ಮಾಡುವ ಮೂಲಕ ಜಿಲ್ಲೆಯಲ್ಲಿ ಜಿರೋ ಅಪಘಾತ ವಲಯ ಸೃಷ್ಟಿಯಾಗಬೇಕು ಎಂದು ಹೇಳಿದರು.

ಜೆಸ್ಕಾಂ ಕೊಪ್ಪಳ ಕಾರ್ಯ ಮತ್ತು ಪಾಲನಾ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರಾದ ಫಣಿ ರಾಜೇಶ್ ಮಾತನಾಡಿ, ಲೈನ್ ಮ್ಯಾನ್‌ಗಳ ಕಾರ್ಯ ಪ್ರಮುಖವಾಗಿದೆ. ಅವರಿಗೆ ಸುರಕ್ಷತಾ ಕ್ರಮಗಳ ಬಗ್ಗೆ ಅರಿವು ಮೂಡಿಸಲು ಈ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಂಡಿದೆ. ಎಲ್ಲಾ ಲೈನ್ ಮ್ಯಾನ್‌ಗಳು ತರಬೇತಿಯ ಸದುಪಯೋಗ ಪಡೆದುಕೊಂಡು ಸುರಕ್ಷತೆ ಜೊತೆಗೆ ಅತ್ಯಂತ ಜಾಗೃತಿಯಿಂದ ಕಾರ್ಯನಿರ್ವಹಿಸಬೇಕು. ಈ ತರಬೇಯಿಂದ ತಾವು ವಿದ್ಯುತ್ತಿನ ಕೆಲಸವನ್ನು ಸುರಕ್ಷತೆಯಿಂದ ಹೇಗೆ ಮಾಡಬೇಕು ಎಂದು ಕಲಿಯಲು ಅನುಕೂಲವಾಗಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾರ್ಯನಿರ್ವಾಹಕ ಅಭಿಯಂತರರಾದ ರಾಜೇಶ ವರ್ಮಾ, ಮೊಟ್ಲಾ ನಾಯ್ಕ್ ಹಾಗೂ ನಜಮುನ್ನಿಸಾ, ಉಪ ಲೆಕ್ಕ ನಿಯಂತ್ರಣಾಧಿಕಾರಿ ವೀಣಾ ಕುಮಾರಿ, ಲೆಕ್ಕಾಧಿಕಾರಿ ತಿರುಮಲೈ, ವಿದ್ಯುತ್ ನೌಕರರ ಸಂಘದ ಪದಾಧಿಕಾರಿಗಳಾದ ಮನೋಹರ, ನಾಗರಾಜ ಗಾಯಕವಾಡ್, ಹನುಮಂತಪ್ಪ ಹುನಗುಂದ, ಅನಾಳಪ್ಪ, ಹನುಮಂತಪ್ಪ ಹಾದಿಮನಿ ಸೇರಿದಂತೆ ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಕೊಪ್ಪಳ ಜೆಸ್ಕಾಂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಲೈನ್ ಮ್ಯಾನ್‌ಗಳಿಗೆ ವಿದ್ಯುತ್ ಸುರಕ್ಷತಾ ಜಾಗೃತಿ: ಕಾರ್ಯಾಗಾರದಲ್ಲಿ ಡಾ ಶಿವಪ್ಪ ಎಸ್., ಬಿ.ಆರ್ ದೇಸಾಯಿ, ವೆಂಕಟೇಶ್, ಡಾ ಚನ್ನಕೇಶವನ ಹಾಗೂ ಜಿಲ್ಲಾ ಅಗ್ನಿಶಾಮಕ ದಳದ ಅಧಿಕಾರಿ ರಮೇಶ ಅವರು ವಿದ್ಯುತ್ ಸುರಕ್ಷತಾ ಕ್ರಮಗಳ ಕುರಿತು ಮಾಹಿತಿ ನೀಡಿದರು. ಮಾರ್ಗದಾಳು, ಸಹಾಯಕ ಮಾರ್ಗದಾಳು ಹಾಗೂ ಕಿರಿಯ ಮಾರ್ಗದಾಳುಗಳು ತರಬೇತಿಯಲ್ಲಿ ಪಾಲ್ಗೊಂಡಿದ್ದರು ಕಾರ್ಯಕ್ರಮದ ಮೇಲುಸ್ತುವಾರಿಯನ್ನು ಹಿರಿಯ ಸಹಾಯಕರಾದ ನಾಗರಾಜ ಗಾಯಕವಾಡ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಎಲ್.ಅರುಣ ಕುಮಾರ ವಹಿಸಿದ್ದರು. ಕಿರಿಯ ಅಭಿಯಂತರರಾದ ಗಿರೀಶ್ ಎಂ ಕಾರ್ಯಕ್ರಮ ನಿರೂಪಿಸಿ, ಕೊನೆಯಲ್ಲಿ ವಂದಿಸಿದರು.

## ಎಸ್ಸಿ, ಎಸ್ಟಿ ಅಲೆಮಾರಿ ಸಮುದಾಯದವರನ್ನು ಮುಖ್ಯವಾಹಿನಿಗೆ ತರುವ ಕೆಲಸ ಮಾಡಬೇಕಿದೆ: ಪಲ್ಲವಿ ಜಿ.



**ಕೊಪ್ಪಳ :** ಸರ್ಕಾರದ ವಿವಿಧ ಯೋಜನೆಗಳನ್ನು ಬಳಸಿಕೊಂಡು ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದವರನ್ನು ಮುಖ್ಯವಾಹಿನಿಗೆ ತರುವ ಕೆಲಸ ಮಾಡಬೇಕಿದೆ ಎಂದು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಪಲ್ಲವಿ ಜಿ. ಹೇಳಿದರು. ಅವರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದವರ ಅಹವಾಲು ಸ್ವೀಕರಿಸಲು ಹಾಗೂ ಅವರ ಸಮಸ್ಯೆಗಳನ್ನು ಪರಿಹರಿಸಲು ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದೇನೆ. ವಿವಿಧ ಜಿಲ್ಲೆಗಳಲ್ಲಿ ಅಲೆಮಾರಿಗಳು ಹೀನಾಯ ಸ್ಥಿತಿಯಲ್ಲಿ ಜೀವನ ಮಾಡುತ್ತಿದ್ದಾರೆ. ಇಂತಹ ಸಮುದಾಯಗಳನ್ನು ಸಮಾಜದ ಮುಖ್ಯವಾಹಿನಿಗೆ ತರಲು ರಾಜ್ಯ ಸರ್ಕಾರವು ಹತ್ತು ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಆದರೆ, ಅನುಷ್ಠಾನಾಧಿಕಾರಿಗಳ ನಿಷ್ಕಾಳಜಿಯಿಂದ ಈ ಎಲ್ಲಾ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಅಲೆಮಾರಿ ಸಮುದಾಯದವರು ವಾಸಿಸುವ ಸ್ಥಳಗಳಿಗೆ ಭೇಟಿ ನೀಡಿ, ಅವರ ಜೀವನ ಸ್ಥಿತಿಯನ್ನು ಖುದ್ದಾಗಿ ಪರಿಶೀಲಿನೆ ನಡೆಸುತ್ತಿದ್ದೇನೆ ಎಂದು ಹೇಳಿದರು.

ಪರಿಶಿಷ್ಟ ಜಾತಿಗೆ ಸೇರಿದ 51 ಜಾತಿಗಳು, ಪರಿಶಿಷ್ಟ ಪಂಗಡಕ್ಕೆ ಸೇರಿದ 23 ಜಾತಿಗಳು ಹಾಗೂ 25 ಆದಿವಾಸಿ ಸಮುದಾಯಗಳು ಅಲೆಮಾರಿ ನಿಗಮಕ್ಕೆ ಬರುತ್ತವೆ.

ಈಗಾಗಲೇ ಕೊಪ್ಪಳ ಜಿಲ್ಲೆಯ ಕಾರಟಗಿ, ಗಂಗಾವತಿ, ಕುಷ್ಟಗಿ ಹಾಗೂ ಕೊಪ್ಪಳ ನಗರದ ವಿವಿಧೆಡೆ ವಾಸವಿರುವ ಅಲೆಮಾರಿ ಸಮುದಾಯದ ಕುಟುಂಬಗಳ ಸ್ಥಳ ವೀಕ್ಷಣೆ ಮಾಡಿದ್ದು, ಗಂಗಾವತಿಯಲ್ಲಿ ಬುಡಗಜಂಗಮ, ಶಿಳ್ಳೆಕ್ಯಾತ, ಸುಡಗಾಡ ಸಿದ್ದರು ಹಾಗೂ ಸಿಂದೋಳು ಸೇರಿದಂತೆ ಸುಮಾರು 130 ಕುಟುಂಬಗಳು ವಾಸಿಸುತ್ತಿದ್ದ, ಈ ಪ್ರದೇಶಕ್ಕೆ ಯಾವುದೇ ಅಧಿಕಾರಿಗಳು ಭೇಟಿ ನೀಡಿರುವುದಿಲ್ಲ. ಜಿಲ್ಲೆಯ ಇತರ ಪ್ರದೇಶಗಳಿಗೂ ಭೇಟಿ ನೀಡಿದಾಗ, ಕೆಲವು ಪ್ರದೇಶಗಳಲ್ಲಿ ಯಾವುದೇ ರೀತಿಯ ಮೂಲಸೌಕರ್ಯಗಳಿಲ್ಲ. ಸ್ವಂತ ಮನೆ, ನಿವೇಶನವಿಲ್ಲ. ಸಂಪರ್ಕ ರಸ್ತೆ, ವಿದ್ಯುತ್ ದೀಪಗಳಿಲ್ಲ. ಯಾವುದೇ ಆರೋಗ್ಯ ಭದ್ರತೆಗಳಿಲ್ಲ. ಇದರ ಜೊತೆಗೆ ಬಹು ವರ್ಷಗಳಿಂದ ಚರಂಡಿ ಸ್ವಚ್ಛಗೊಳಿಸದೆ ಇರುವುದು ಕಂಡುಬಂದಿದ್ದು, ಸಂಬಂಧ ಪಟ್ಟ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿದೆ. ಈ ಎಲ್ಲಾ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು ಹೇಳಿದರು.

ನಿಗಮದಿಂದ ಭೂ ಒಡೆತನ ಯೋಜನೆ, ನಿವೇಶನ ಹಾಗೂ ಮನೆ ಸೌಲಭ್ಯ, ಬ್ಯಾಂಕ್‌ಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಸಾಲ ಯೋಜನೆ, ಮಕ್ಕಳಿಗೆ ಶೈಕ್ಷಣಿಕ ಹಾಗೂ ಹತ್ತು ಹಲವಾರು ಕಾರ್ಯಕ್ರಮಗಳಿದ್ದು, ಇವುಗಳ ಬಗ್ಗೆ ಅಲೆಮಾರಿ ಸಮುದಾಯದ ಜನರಿಗೆ ಅರಿವು ಮೂಡಿಸಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕಾಗಿದೆ ಎಂದು ಹೇಳಿದರು.

ಈ ಸುದ್ದಿಗೋಷ್ಠಿಯಲ್ಲಿ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಅಜ್ಜಪ್ಪ ಸೋಗಲದ. ಅಧ್ಯಕ್ಷರ ವಿಶೇಷ ಕರ್ತವ್ಯಾಧಿಕಾರಿ ಆನಂದ ಏಕಲವ್ಯ. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಶರಣಪ್ಪ ಚವ್ಹಾಣ. ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಸರ್ಕಾರದ ಯೋಜನೆಗಳನ್ನು ಅಲೆಮಾರಿ ಸಮುದಾಯಗಳ ಜನರಿಗೆ ತಲುಪಿಸುವ ಜವಾಬ್ದಾರಿ ಅಧಿಕಾರಿಗಳ ಮೇಲಿದೆ: ಪಲ್ಲವಿ ಜಿ.



**ಕೊಪ್ಪಳ :** ಅಲೆಮಾರಿ ಸಮುದಾಯದಗಳ ಜನರು ಸಮಾಜದಲ್ಲಿ ಅತಿ ಹಿಂದುಳಿದಿದ್ದು ಅವರಿಗೆ ಸರ್ಕಾರದ ಯೋಜನೆಯ ಲಾಭ ಸಮರ್ಪಕವಾಗಿ ತಲುಪಿಸುವ ಜವಾಬ್ದಾರಿ ಅಧಿಕಾರಿಗಳ ಮೇಲಿದೆ ಎಂದು ಕರ್ನಾಟಕ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಪಲ್ಲವಿ ಜಿ ಹೇಳಿದರು.

ಅವರು ಮಂಗಳವಾರ ಕೊಪ್ಪಳ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳು. ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹಾಗೂ ಜಿಲ್ಲಾ ಅನುಷ್ಠಾನ ಸಮಿತಿಯ ಸದಸ್ಯರೊಂದಿಗೆ ಪ್ರಗತಿ ಪರಿಶೀಲನೆ ಸಭೆ ನಡೆಸಿ ಮಾತನಾಡಿದರು.

ಅಲೆಮಾರಿ ಸಮುದಾಯಗಳ ಜನರು ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಅವರಿಗೆ ಇರಲು ಸರಿಯಾದ ಮನೆಯಿಲ್ಲ. ರೇಷನ್ ಕಾರ್ಡ್ ಇಲ್ಲ. ಹೀಗೆ ಹಲವಾರು ಸಮಸ್ಯೆಗಳು ಇವೆ. ಅಲೆಮಾರಿ ಸಮುದಾಯದ ಜನರು ನಮ್ಮಂತೆ ಮನುಷ್ಯರು ಅಲ್ವಾ ಅವರ ಸಮಸ್ಯೆಗಳಿಗೆ ಅಧಿಕಾರಿಗಳು ಪ್ರಥಮ ಆದ್ಯತೆ ನೀಡಬೇಕೆಂದು ಹೇಳಿದರು.

ಅಲೆಮಾರಿ ಅಭಿವೃದ್ಧಿ ನಿಗಮದಿಂದ ಹಲವಾರು ಯೋಜನೆಗಳನ್ನು ಜಾರಿಗೆ ತರಲಾಗಿದೆ ಇವುಗಳನ್ನು ಜನರಿಗೆ ತಲುಪಿಸುವ ಕೆಲಸ ಅಧಿಕಾರಿಗಳು ಮಾಡಬೇಕು. ಅಧಿಕಾರಿಗಳು ಒಂದು ಭಾರಿಯೂ ನಮಗೆ ಭೇಟಿಯಾಗಿಲ್ಲ ನಮ್ಮ ಸಮಸ್ಯೆಗಳಿಗೆ ಸರಿಯಾಗಿ ಸ್ಪಂದಿಸಿಲ್ಲ ಎಂದು ಹಲವಾರು ದೂರುಗಳು ನಮಗೆ ಬಂದಿವೆ. ಕೊಪ್ಪಳ ಜಿಲ್ಲೆಯಲ್ಲಿ 43 ಸಾವಿರಕ್ಕಿಂತ ಹೆಚ್ಚಿನ ಅಲೆಮಾರಿ ಸಮುದಾಯಗಳ ಜನರು ಈ ಜಿಲ್ಲೆಯಲ್ಲಿ ಇದ್ದಾರೆ ಎಂದು ಹೇಳಿದರು.

ಇಲ್ಲಿಯವರೆಗೆ ಜಿಲ್ಲೆಯಲ್ಲಿ ಎಷ್ಟು ಜನ ಅಲೆಮಾರಿಗಳಿಗೆ ಭೂಮಿ ಮತ್ತು ಮನೆ ಇಲ್ಲದವರನ್ನು ಗುರುತಿಸಲಾಗಿದೆ. ಕಳೆದ 3 ವರ್ಷಗಳಿಂದ ಅಲೆಮಾರಿ ಅಭಿವೃದ್ಧಿ ನಿಗಮದಿಂದ ಯಾವುದೇ ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ಜಿಲ್ಲೆಯಲ್ಲಿ ನೀಡಿಲ್ಲ. ಶಾಲೆಯಲ್ಲಿ ಕಲಿಯುವ ಅಲೆಮಾರಿ ಮಕ್ಕಳಿಗೆ ವಸತಿ ನಿಲಯಗಳಲ್ಲಿ ಇರಲು ಶೇ. 10 ಪ್ರತಿಶತ ಮೀಸಲಾತಿ ಇದೆ ಇದನ್ನು ಹೆಚ್ಚಿಸಲು ನಮ್ಮ ನಿಗಮದಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಸಾಮಾಜಿಕ ಪ್ರಜ್ಞೆ ಇಲ್ಲದ ಸಣ್ಣ– ಸಣ್ಣ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯಗಳನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಸರಕಾರ ಅಲೆಮಾರಿ ಅಭಿವೃದ್ಧಿ ಕೋಶದಿಂದ ಈಗ ಅಭಿವೃದ್ಧಿ ನಿಗಮವನ್ನಾಗಿ ಪರಿವರ್ತನೆ ಮಾಡಿದೆ. ಪಾರದರ್ಶಕವಾಗಿ ನಮ್ಮ ನಿಗಮದಿಂದ ಫಲಾನುಭವಿಗಳಿಗೆ ಸರ್ಕಾರದ ಲಾಭ ಸಿಗಬೇಕು. ಪ್ರತಿವರ್ಷ ನಮ್ಮ ನಿಗಮದಿಂದ ಆನಲೈನ್ ಮೂಲಕ ಅರ್ಜಿಗಳನ್ನು ಕರೆಯಲಾಗುತ್ತದೆ. ಸ್ವಾತಂತ್ರ್ಯ ಸಿಕ್ಕು 78 ವರ್ಷಗಳಾದರು ಇನ್ನೂ ಅಲೆಮಾರಿ ಸಮಾಜ ನಿರ್ಲಕ್ಷಿತ ಸಮುದಾಯವಾಗಿದೆ ಎಂದು ಹೇಳಿದರು.

ಅಲೆಮಾರಿ ನಿಗಮದ ಅಧ್ಯಕ್ಷರು ಮಂಗಳವಾರ ಬೆಳಿಗ್ಗೆ ಕೊಪ್ಪಳ ನಗರದಲ್ಲಿ ಅಲೆಮಾರಿ ಸಮುದಾಯಗಳ ಜನರು ವಾಸಿಸುವ ಕಾಲೋನಿಗಳಿಗೆ ಭೇಟಿ ನೀಡಿ ಅವರ ಸಮಸ್ಯೆಗಳನ್ನು ಆಲಿಸಿದರು.

ಈ ಸಭೆಯಲ್ಲಿ ಜಿಲ್ಲಾಧಿಕಾರಿ ನಲಿನ್ ಅತುಲ್. ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಅಜ್ಜಪ್ಪ ಸೊಗಲದ. ಅಧ್ಯಕ್ಷರ ವಿಶೇಷ ಕರ್ತವ್ಯಾಧಿಕಾರಿ ಆನಂದ ಏಕಲವ್ಯ. ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ.

ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಷ್ಮಾ ಹಾನಗಲ್. ಹೆಚ್ಚುವರಿ ಪೋಲಿಸ್ ಅಧೀಕ್ಷಕರಾದ ಹೇಮಂತ ಕುಮಾರ. ಅಲೆಮಾರಿ ಅಭಿವೃದ್ಧಿ ನಿಗಮದ ಜಿಲ್ಲಾ ಅನುಷ್ಠಾನ ಸಮಿತಿ ಸದಸ್ಯರು ಹಾಗೂ ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಅಲೆಮಾರಿ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

## ವಿವಿಧ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಕ್ಕೆ ಅರ್ಜಿ: ಅವಧಿ ವಿಸ್ತರಣೆ

**ಕೊಪ್ಪಳ :** ಕೊಪ್ಪಳ ವಿಶ್ವವಿದ್ಯಾಲಯದಿಂದ 2024–25ನೇ ಸಾಲಿನ ಎಂ.ಎ. ಕನ್ನಡ, ಇಂಗ್ಲೀಷ್, ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಪತ್ರಿಕೋದ್ಯಮ, ಎಂ.ಕಾಂ. ಹಾಗೂ ಎಂ.ಎಸ್ಸಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು 'ಗಣಿತಶಾಸ್ತ್ರ ಕೋರ್ಸುಗಳಿಗೆ ಕೊಪ್ಪಳ ವಿಶ್ವವಿದ್ಯಾಲಯದ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ, ಯಲಬುರ್ಗಾ ಮತ್ತು ಗಂಗಾವತಿ ಹಾಗೂ ಕೊಪ್ಪಳ ವಿಶ್ವವಿದ್ಯಾಲಯದ ಸಂಯೋಜಿತ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಅನುದಾನೇತರ ಮಹಾವಿದ್ಯಾಲಯಗಳಲ್ಲಿ ಪ್ರವೇಶಾತಿಯನ್ನು ಯುಯುಸಿಎಂಎಸ್ ತಂತ್ರಾಂಶದ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅವಧಿಯನ್ನು ನವೆಂಬರ್ 30ರವರೆಗೆ ವಿಸ್ತರಿಸಲಾಗಿದೆ.

ಅರ್ಜಿ ಸಲ್ಲಿಸಲು ನವೆಂಬರ್ 19 ಕೊನೆಯ ದಿನಾಂಕವಾಗಿತ್ತು, ಈ ದಿನಾಂಕವನ್ನು ವಿಸ್ತರಿಸಲಾಗಿದ್ದು, ನ.30ರ ವರೆಗೆ ಅರ್ಜಿ ಸಲ್ಲಿಸಲು ಅವಕಾಶವಿದೆ. ಆಸಕ್ತಿಯುಳ್ಳ ಅರ್ಹ ವಿದ್ಯಾರ್ಥಿಗಳು ಯುಯುಸಿಎಂಎಸ್‌ಪೋರ್ಟಲ್ (https://uuems karnataka.gov.in) ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಬಹುದಾಗಿದೆ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರ ಅದರ ಒಂದು ಪ್ರತಿ ಜೊತೆಗೆ ಸಂಬಂಧಪಟ್ಟ ದಾಖಲಾತಿಗಳ ನಕಲು ಪ್ರತಿಯನ್ನು ದೃಢೀಕರಿಸಿ ಕೊಪ್ಪಳ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ಅರ್ಜಿ ಶುಲ್ಕಗಳ ವಿವರ ಹಾಗೂ ಅರ್ಜಿಗಳನ್ನು ಸಲ್ಲಿಸಲು ಪಾಲಿಸಬೇಕಾದ ಮಾನದಂಡಗಳಿಗೆ ಸಂಬಂಧಿಸಿದ ಮಾಹಿತಿಯನ್ನು ವಿಶ್ವವಿದ್ಯಾಲಯದ ಜಾಲತಾಣಕ್ಕೆ ಭೇಟಿ ನೀಡಿ ಅಥವಾ ಪ್ರವೇಶಾತಿ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳು ಕೊಪ್ಪಳ ವಿಶ್ವವಿದ್ಯಾಲಯದ ಮುಖ್ಯ ಆವರಣ, 4ನೇ ಮಹಡಿ, ಸರ್ಕಾರಿ ತಾಂತ್ರಿಕ ಮಹಾವಿದ್ಯಾಲಯ, ತಳಕಲ್, ಸ್ನಾತಕೋತ್ತರ ಕೇಂದ್ರ, ಯಲಬುರ್ಗಾ ಮತ್ತು ಗಂಗಾವತಿ ಹಾಗೂ ಸಂಯೋಜಿತ ಮಹಾವಿದ್ಯಾಲಯಗಳಿಗೆ ನೇರವಾಗಿ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಕೊಪ್ಪಳ ವಿಶ್ವವಿದ್ಯಾಲಯದ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಕ್ಕಳಲ್ಲಿನ ಕೌಶಲ್ಯಗಳನ್ನು ಹೊರ ತರುವುದೆ ಬಿದರಿ ಚೈಲ್ಡ್ ಅಕಾಡೆಮಿ ಉದ್ದೇಶ: ಡಾ. ಎಲ್.ಎಚ್. ಬಿದರಿ

**ವಿಜಯಪುರ** : ಇಂದಿನ ಮೊಬೈಲ್ ಜಗತ್ತಿನಿಂದ ಮಕ್ಕಳನ್ನು ಹೊರ ತಂದು ಸಂಗೀತ, ಸಾಹಿತ್ಯ, ಕ್ರೀಡೆ, ಹೀಗೆ ಮುಂತಾದ ವಿಭಾಗಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ಮೂಲಕ ಮಕ್ಕಳಲ್ಲಿರುವ ಕೌಶಲ್ಯಗಳನ್ನು ಹೊರ ತರುವುದೇ ನಮ್ಮ ಉದ್ದೇಶ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಬಿದರಿ ಚೈಲ್ಡ್ ಅಕಾಡೆಮಿ ಸಂಸ್ಥಾಪಕ ಅಧ್ಯಕ್ಷ ಡಾ. ಎಲ್.ಎಚ್.ಬಿದರಿ ಹೇಳಿದರು.



ನಗರದ ಗಗನಮಹಲ್ ಆವರಣದಲ್ಲಿ ಹಮ್ಮಿಕೊಂಡಿದ್ದ ಚಿತ್ರಕಲಾ ಸ್ಪರ್ಧೆ ಮತ್ತು ಬಿದರಿ ನರ್ಸಿಂಗ್ ಕಾಲೇಜಿನಲ್ಲಿ ನಡೆದ ಪ್ರಬಂಧ ಸ್ಪಧೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಿದರಿ ಚೈಲ್ಡ್ ಅಕಾಡೆಮಿ ಪ್ರಾರಂಭ ಮಾಡುವ ಉದ್ದೇಶ ಪ್ರಸ್ತುತ ದಿನಮಾನದಲ್ಲಿ ಮೊಬೈಲ್ ಮತ್ತು ಟೀವಿ ಗೀಳಿನಿಂದಾಗಿ ಮಕ್ಕಳಲ್ಲಿರುವ ಕೌಶಲ್ಯಗಳು ಮುಚ್ಚಿ ಹೋಗುತ್ತಿವೆ. ಮಕ್ಕಳು ಮೊಬೈಲ್ ಲೋಕದಲ್ಲಿ ಮುಳುಗಿ ಹೋಗಿದ್ದು ಹೊರಗಿನ ಜಗತ್ತಿನ ಬಗ್ಗೆ ಅರಿವೇ ಇಲ್ಲದಂತಾಗಿದೆ. ಹೀಗಾಗಿ ನಮ್ಮ ಬಿದರಿ ಚೈಲ್ಡ್ ಅಕಾಡೆಮಿ ಮೂಲಕ ವಿವಿಧ ಯೋಜನೆಗಳನ್ನು ಹಮ್ಮಿಕೊಳ್ಳುವ ಮೂಲಕ ಮಕ್ಕಳಲ್ಲಿ ಇರುವ ಕೌಶಲ್ಯಗಳನ್ನು ಹೊರ ತರಲು ಪ್ರಯತ್ನಿಸಲಾಗುತ್ತಿದೆ ಎಂದರು.

ನಮ್ಮ ಚೈಲ್ಡ್ ಅಕಾಡೆಮಿಯಿಂದ ಪ್ರತಿವರ್ಷದಂತೆ ಈ ವರ್ಷವೂ ಹಲವಾರು ಕಾರ್ಯಕ್ರಮಗಳನ್ನು ರೂಪಿಸಲಾಗಿದ್ದು, ನಗರದ ಹಲವಾರು ಶಾಲಾ-ಕಾಲೇಜುಗಳಿಂದ ಸುಮಾರು 90 ವಿದ್ಯಾರ್ಥಿಗಳು ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿ "ನನ್ನ ಮೆಚ್ಚಿನ ಪ್ರಾಣಿ ಹಾಗೂ ನನ್ನ ಕನಸಿನ ಊರು" ವಿಷಯಗಳ ಮೇಲೆ ವರ್ಣರಂಜಿತ ಚಿತ್ರಗಳನ್ನು ಬಿಡಿಸಿದರು. ಅದೇ ರೀತಿ ನಗರದ ನ್ಯೂ ಅಶ್ವಿನಿ ನರ್ಸಿಂಗ್ ಕಾಲೇಜಿನಲ್ಲಿ ನಡೆದ "ಪ್ರಬಂಧ ಸ್ಪರ್ಧೆ"ಯಲ್ಲಿ "ಮಕ್ಕಳ ಮೇಲೆ ಅಂತರಜಾಲ, ಟಿವಿ ಹಾಗೂ ಮೊಬೈಲ್‌ಗಳ ಪ್ರಭಾವ" ವಿಷಯದ ಕುರಿತು ಸುಮಾರು 52 ಮಕ್ಕಳು ಪ್ರಬಂಧ ಬರೆದಿದ್ದು ವಿಶೇಷವಾಗಿತ್ತು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ನ.22 ರಂದು ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಆಯೋಜಿಸಿರುವ ಸಮಾರಂಭದಲ್ಲಿ ನಗದು ಬಹುಮಾನ, ಪಾರಿತೋಷಕ ಮತ್ತು ಪ್ರಶಸ್ತಿಪತ್ರವನ್ನು ಸಹ ನೀಡಲಾಗುತ್ತಿದೆ. ಪ್ರತಿ ವರ್ಷವೂ ಲಕ್ಷಾಂತರ ರೂಪಾಯಿಯನ್ನು ಖರ್ಚು ಮಾಡಿ ಮಕ್ಕಳ ಕೌಶಲ್ಯ ಅಭಿವೃದ್ಧಿಗಾಗಿ ನಮ್ಮ ಅಕಾಡೆಮಿ ಶ್ರಮಿಸುತ್ತಿರುವುದು ನಮಗೆ ಹೆಮ್ಮೆಯಿದೆ. ಮುಂಬರುವ ದಿನಮಾನಗಳಲ್ಲಿ ಇನ್ನೂ ದೊಡ್ಡ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ಯೋಜಿಸುವ ಮೂಲಕ ವಿಜಯಪುರ ನಗರದ ಮಕ್ಕಳಲ್ಲಿರುವ ಕಲೆಗಳನ್ನು ಹೊರತರುವ ಮೂಲಕ ರಾಜ್ಯಕ್ಕೆ ಮಾದರಿಯಾಗುವಂತೆ ಕೆಲಸ ಮಾಡಲಾಗುವುದು ಎಂದರು.

# ಹನಿ ನೀರಾವರಿ ಉಪಕರಣಗಳ ವಿತರಣೆಯಲ್ಲಿ ರೈತರ ನಡುವೆ ತಾರತಮ್ಯ ಮಾಡದಂತೆ ಕೃಷಿ ಆಯುಕ್ತರಿಗೆ ರೈತರ ಮನವಿ



**ವಿಜಯಪುರ** : ರಾಜ್ಯದ ರೈತರಿಗೆ ಕೃಷಿ ಇಲಾಖೆ ವತಿಯಿಂದ ಹನಿ ನೀರಾವರಿ ಉಪಕರಣಗಳನ್ನು ಪಡೆಯಲು ಕಡ್ಡಾಯವಾಗಿ ಸಣ್ಣ ರೈತರು ಅಂದರೆ 5 ಎಕರೆಗಿಂತ ಕಡಿಮೆ ಜಮೀನು ಹೊಂದಿರುವ ರೈತರಿಗೆ ಮಾತ್ರ ಶೇ. 90 ರಷ್ಟು ಸಬ್ಸಿಡಿ ರೂಪದಲ್ಲಿ ಹನಿ ನೀರಾವರಿ ಉಪಕರಣಗಳನ್ನು ಕೇವಲ ಚಿಕ್ಕ ಹಿಡುವಳಿದಾರರಿಗೆ ಮಾತ್ರ ಪೂರೈಸುವುದು ರೈತರಲ್ಲಿಯೇ ಇಬ್ಬಗೆಯ ನೀತಿ ಅನುಸರಿಸುತ್ತಿರುವುದು ಸರಿ ಅಲ್ಲ. ಎಲ್ಲ ರೈತರಿಗೂ ಒಂದೇ ರೀತಿ ಕೃಷಿ ಉಪಕರಣಗಳನ್ನು ಶೇ.90 ರಷ್ಟು ಸಬ್ಸಿಡಿಯಲ್ಲಿ ವಿತರಿಸಬೇಕೆಂದು ಕೃಷಿ ಇಲಾಖೆಯ ಆಯುಕ್ತ ವಾಯ್.ಎಸ್. ಪಾಟೀಲ ಅವರಿಗೆ ಮನವಿ ಸಲ್ಲಿಸಲಾಯಿತು.

ಶುಕ್ರವಾರದಂದು ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಬೆಂಗಳೂರಿನ ಕೃಷಿ ಆಯುಕ್ತರ ಕಛೇರಿಗೆ ತೆರಳಿ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಕೃಷಿ ಇಲಾಖೆಯ ಮಾರ್ಗಸೂಚಿ 2023-24ರ ಪ್ರಕಾರ ದೇಶದ ಎಲ್ಲ ವರ್ಗದ ರೈತರಿಗೆ 2 ಹೇಕ್ಟರ್‌ವರೆಗೆ ಶೇ.90 ರಷ್ಟು ಸಬ್ಸಿಡಿಯಂತೆ ನೀರಾವರಿ ಉಪಕರಣಗಳನ್ನು ಪಡೆಯಬಹುದಾಗಿದೆ. ಮತ್ತು ಕರ್ನಾಟಕ ಸರ್ಕಾರದ ಕೃಷಿ ಇಲಾಖೆಯ ಮಾರ್ಗಸೂಚಿ 2019ರ ಪ್ರಕಾರ ಎಲ್ಲ ವರ್ಗದ ರೈತರಿಗೆ ಶೇ.90ರಷ್ಟು ಸಬ್ಸಿಡಿ ರೂಪದಲ್ಲಿ ಹನಿ ನೀರಾವರಿ ಉಪಕರಣಗಳನ್ನು ಪಡೆಯಬಹುದಾಗಿದೆ. ಕೆಲ ಕೃಷಿ ಇಲಾಖೆಯ ಅಧಿಕಾರಿಗಳು ದುರುದ್ದೇಶದಿಂದ ಹನಿ ನೀರಾವರಿ ಉಪಕರಣಗಳನ್ನು ಪಡೆಯಲು ಚಿಕ್ಕ ಹಿಡುವಳಿ ರೈತರ ಪ್ರಮಾಣ ಪತ್ರ ಮತ್ತು 2 ಹೇಕ್ಟರ್‌ಗಿಂತ ಕಡಿಮೆ ಜಮೀನು ಹೊಂದಿರಬೇಕೆಂದು ಬೇಕಾಬಿಟ್ಟಿ ರಾಜ್ಯ ಸರ್ಕಾರ ಆದೇಶ ಹೊರಡಿಸಿ ಕೇಂದ್ರ ಸರ್ಕಾರದ ಆದೇಶವನ್ನು ಗಾಳಿಗೆ ತೂರಿ ಇಡೀ ರೈತ ಕುಲಕ್ಕೆ ಅನ್ಯಾಯಮಾಡಲಾಗಿದೆ. ಆದ್ದರಿಂದ ಎಲ್ಲಾ ವರ್ಗದ ರೈತರಿಗೂ ಒಂದೇ ತೆರನಾಗಿ ಹನಿ ನೀರಾವರಿ ಉಪಕರಣಗಳನ್ನು ಶೇ.90ರಷ್ಟು ರಿಯಾಯತಿ ದರದಲ್ಲಿ ವಿತರಿಸಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಬಸವರಾಜ ತಾಳಿಕೋಟಿ, ಸಂಗಮೇಶ ಸಗರ ಇದ್ದರು.

# ಮಧುಮೇಹಿಗಳು ಪಾದಗಳ ನಿರ್ಲಕ್ಷ್ಯ ಮಾಡಬಾರದು: ಡಾ. ಕೋಟೆಣ್ಣವರ

**ವಿಜಯಪುರ :** ಮಧುಮೇಹಿಗಳು ಪಾದಗಳ ನಿರ್ಲಕ್ಷ್ಯ ಮಾಡಬಾರದು ಎಂದು ಬಿ. ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ. ಮಂಜುನಾಥ ಕೋಟೆಣ್ಣವರ ಹೇಳಿದ್ದಾರೆ. ವಿಶ್ವಮಧು ಮೇಹ ದಿನಾಚರಣೆ ಅಂಗವಾಗಿ ವಿಭಾಗದ ವತಿಯಿಂದ ಮತ್ತು ವಿಜಯಪುರ ಜಿಲ್ಲಾ ಶಸ್ತ್ರ ಚಿಕಿತ್ಸಕರ ಸಂಘದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಉಚಿತ ಮಧುಮೇಹ ಪಾದರೋಗಗಳ ತಪಾಸಣಾ ಮತ್ತು ಚಿಕಿತ್ಸಾ ಶಿಬಿರ ಸಪ್ತಾಹದ ಅಂಗವಾಗಿ ಶನಿವಾರ ನಡೆದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.



ಮಧುಮೇಹಿಗಳು ತಮ್ಮ ರಕ್ತದಲ್ಲಿನ ಸಕ್ಕರೆ ಅಂಶವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳದಿದ್ದರೆ, ದೀರ್ಘಕಾಲೀನ ಸಮಸ್ಯೆಗಳಾದರೆಟಿನೋಪತಿ(ದೃಷ್ಟಿಹೀನತೆ), ನೆಫ್ರೋಪತಿ (ಕಿಡ್ನಿತೊಂದರೆ) ಮತ್ತು ನ್ಯೂರೊಪತಿ( ನರಗಳ ದೌರ್ಬಲ್ಯ) ಗಳಿಂದ ಬಳಲಬೇಕಾಗುತ್ತದೆ. ನರಗಳ ದೌರ್ಬಲ್ಯತೆಯಿಂದ ಸ್ಪರ್ಶ ಜ್ಞಾನ ಕಳೆದುಕೊಳ್ಳಬೇಕಾಗುತ್ತದೆ. ಕಾಲುಗಳು ಶಕ್ತಿಹೀನವಾಗಿ, ಚರ್ಮ ಕೂಡ ಒಣಗಬಹುದು. ಅಲ್ಲದೇ, ಸೋಂಕಿನ ಸಾಧ್ಯತೆಹೆಚ್ಚಾಗಿರುವುದರಿಂದಮಧುಮೇಹ ರೋಗಿಗಳು ಎಚ್ಚರಿಕೆ ವಹಿಸಬೇಕಾಗಿದೆ. ಪ್ರತಿ ವರ್ಷ ಸರಾಸರಿ ಶೇ. 15 ರಷ್ಟು ಮಧುಮೇಹಿಗಳು ಪಾದದ ಸಮಸ್ಯೆಯಿಂದ ಬಳಲುತ್ತಾರೆ. ಪಾದಗಳ ನಿರ್ಲಕ್ಷ್ಯ ವಹಿಸಿದರೆ ಪಾದ ಕಾಲನ್ನು ಕಳೆದುಕೊಂಡು ಅಂಗವಿಕಲತೆ ಉಂಟಾಗಬಹುದು ಎಂದು ಅವರು ಎಚ್ಚರಿಕೆ ನೀಡಿದರು.

ಬಿ.ಎಲ್.ಡಿ.ಇ. ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಾಜೇಶ ಹೊನ್ನುಟಗಿ ಮಾತನಾಡಿ, ಮಧುಮೇಹಿಗಳು ನಿಯಮಿತವಾಗಿ ಪಥ್ಯಾಹಾರ ಸೇವನೆ ಮಾಡಬೇಕು.ನಿಯಮಿತವಾಗಿವ್ಯಾಯಾಮ, ಔಷಧಿ ಸೇವನೆ ಮತ್ತು ವೈದ್ಯರಿಂದ ತಪಾಸಣೆ ಮಾಡಿಸಿಕೊಂಡು ರಕ್ತದಲ್ಲಿನ ಸಕ್ಕರೆ ಅಂಶವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು. ಬಿ.ಎಲ್.ಡಿ.ಇ. ಆಸ್ಪತ್ರೆಯಲ್ಲಿ ಮಧುಮೇಹಿಗಳಿಗೆ ಅವಶ್ಯವಿರುವಎಲ್ಲತಜ್ಞವೈದ್ಯರುಮತ್ತುಚಿಕಿತ್ಸೆ ಸೌಕರ್ಯಗಳು ಲಭ್ಯವಿದ್ದು ವಿಜಯಪುರ ಜಿಲ್ಲೆ ಮತ್ತು ಸುತ್ತಮುತ್ತಲಿನ ಜನರು ಇದರ ಸದುಪಯೋಗ ಪಡೆಯಬೇಕು ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಬಿ.ಎಲ್.ಡಿ.ಇ. ಡೀಮ್ಡ್ ವಿಶ್ವವಿದ್ಯಾಲಯದ ಡೀನ್ ಫ್ಯಾಕಲ್ಟಿ ಆಫ್ ಮೆಡಿಸಿನ್ ಡಾ. ತೇಜಸ್ವಿನಿ ವಲ್ಲಭ, ಉಪ ಪ್ರಾಚಾರ್ಯ ಡಾ. ಎಂ. ಬಿ. ಪಾಟೀಲ, ವಿಜಯಪುರ ಜಿಲ್ಲಾ ಶಸ್ತ್ರ ಚಿಕಿತ್ಸಕರ ಸಂಘದ ಕಾರ್ಯದರ್ಶಿ ಡಾ. ರಮಾಕಾಂತ ಬಳೂರಕರ, ಪ್ರಾಧ್ಯಾಪಕಿ ಡಾ. ವಿಜಯಾ ಪಾಟೀಲ, ಸಹಪ್ರಾಧ್ಯಾಪಕ ಡಾ. ದೀಪಕ ಚವ್ಹಾಣ, ಡಾ. ಸಂಜೀವ ರಾಠೋಡ, ಡಾ. ಪ್ರದೀಪಜಾಜು, ಡಾ. ಮಂಜುನಾಥ ಸಾವಂತ, ಡಾ. ವೀಣಾ ಘಂಟೆಪ್ಪಗೋಳ, ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳಾದ ಡಾ. ಈಶ್ವರ, ಡಾ. ಶ್ರೀಯಾ, ಡಾ. ಸ್ಮಿತ್ ಉಪಸ್ಥಿತರಿದ್ದರು. ಒಂದುವಾರನಡೆದಈಶಿಬಿರದಲ್ಲಿಸುಮಾರು ಇನ್ನೂರಕ್ಕೂ ಹೆಚ್ಚು ಮಧುಮೇಹಿಗಳ ಆರೋಗ್ಯ ತಪಾಸಣೆ, ಉಚಿತ ಸಲಹೆ ಮತ್ತು ಚಿಕಿತ್ಸೆನೀಡಲಾಯಿತು.ರಕ್ತದಲ್ಲಿನಸಕ್ಕರೆಅಂಶ ತಪಾಸಣೆ, ಮೋನೊಫಿಲಾಮೆಂಟಟೆಸ್ಟ್ , ಬಯೋಥಿಸಿಯೋಮೀಟರ್ ಟೆಸ್ಟ್, ಹ್ಯಾಂಡ್ ಹೆಲ್ಡ್ ಡಾಪ್ಲರ್, ಹ್ಯಾರಿಸ್ ಮ್ಯಾಟ್‌ಇಂಪ್ರೆಷನ್‌ಗಳಂಥ ವಿಶೇಷ ತಪಾಸಣೆಗಳನ್ನು ಉಚಿತವಾಗಿ ಮಾಡಲಾಯಿತು.10ಜನಮಧುಮೇಹಿಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ದಾಖಲು ಮಾಡಿಕೊಳ್ಳಲಾಯಿತು.

## ರಾಜ್ಯಮಟ್ಟದ ರೋಡ್ ಸೈಕ್ಲಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಜಿಲ್ಲೆಯ ಕ್ರೀಡಾಪಟುಗಳ ಸಾಧನೆ

**ವಿಜಯಪುರ** : ಮೈಸೂರಿನಲ್ಲಿ ಇತ್ತೀಚೆಗೆ ನಡೆದ 15ನೇ ರಾಜ್ಯ ಮಟ್ಟದ ರೋಡ್ ಸೈಕ್ಲಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಜಿಲ್ಲೆಯ ಕ್ರೀಡಾ ಶಾಲೆ-ನಿಲಯದ ಕ್ರೀಡಾಪಟುಗಳು 02 ಬಂಗಾರ, 03 ಬೆಳ್ಳಿ ಹಾಗೂ ಕಂಚಿನ ಪದಕಗಳನ್ನು ಪಡೆದು ಸಾಧನೆಗೈದಿದ್ದಾರೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ರಾಜಶೇಖರ ಧೈವಾಡಿ ತಿಳಿಸಿದ್ದಾರೆ.

14 ವರ್ಷ ವಯೋಮಿತಿಯ 10 ಕಿ.ಮೀ. ವೈಯಕ್ತಿಕ ಟೈಮ್ ಟ್ರಾಯಲ್ಸ್‌ನಲ್ಲಿ ಕರಿಷ್ಮಾ ತಟಗಾರ ಬೆಳ್ಳಿ ಪದಕ, 16 ವರ್ಷ ವಯೋಮಿತಿಯ 15 ಕಿ.ಮೀ. ವೈಯಕ್ತಿಕ ಟೈಮ್ ಟ್ರಾಯಲ್ಸ್‌ನಲ್ಲಿ ಜ್ಯೋತಿ ರಾಠೋಡ ಬಂಗಾರ ಪದಕ, ಕೋಕಿಲಾ ಬೆಳ್ಳಿ ಪದಕ ಹಾಗೂ ದೀಪಿಕಾ ಫಡತರೆ ಕಂಚಿನ ಪದಕ, 18 ವರ್ಷ ವಯೋಮಿತಿಯ 20 ಕಿ.ಮೀ. ವೈಯಕ್ತಿಕ ಟೈಮ್ ಟ್ರಾಯಲ್ಸ್‌ನಲ್ಲಿ ಶ್ರೀಶೈಲ ವೀರಾಪುರ ಬಂಗಾರ ಹಾಗೂ ಶ್ರೀನಿವಾಸ ರಜಪೂತ ಬೆಳ್ಳಿ ಪದಕ ಪಡೆದಿದ್ದಾರೆ.

ಮುಂಬರುವ 2024ರ ಡಿಸೆಂಬರ್ 4 ರಿಂದ 7ರಂದು ಓರಿಸ್ಸಾ ರಾಜ್ಯದ ಪುರಿಯಲ್ಲಿ ನಡೆಯುವ 29ನೇ ರಾಷ್ಟ್ರೀಯ ರೋಡ್ ಸೈಕ್ಲಿಂಗ್ ಸ್ಪರ್ಧೆಗೆ ರಾಜ್ಯ ತಂಡದಲ್ಲಿ ಕ್ರೀಡಾ ನಿಲಯದಿಂದ ಒಟ್ಟು 6 ಬಾಲಕರು, 5 ಬಾಲಕಿಯರು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದು, ಇವರನ್ನು ಸನ್ಮಾನಿಸಿ ಅಭಿನಂದಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪಠ್ಯೇತರ ಚಟುವಟಿಕೆಗಳಲ್ಲೂ ಮಕ್ಕಳು ತೊಡಗಲು ಪ್ರೋತ್ಸಾಹಿಸುವುದು ಬಹು ಮುಖ್ಯ: ಡಾ. ಎಲ್.ಎಚ್. ಬಿದರಿ



**ವಿಜಯಪುರ** : ಪ್ರಸ್ತುತ ದಿನಮಾನದಲ್ಲಿ ಮಕ್ಕಳ ಮೇಲೆ ಅತಿಯಾದಮ ಅಭ್ಯಾಸ, ಶಾಲೆ, ಮೊಬೈಲ್ ಬಳಕೆ ಇವೆಲ್ಲವೂ ಸಾಕಷ್ಟು ಒತ್ತಡದ ಪ್ರಭಾವ ಬೀರುತ್ತಿವೆ. ಇದು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಹಾನಿಕಾರಕ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಬಿದರಿ ಚೈಲ್ಡ್ ಅಕಾಡೆಮಿಯ ಸಂಸ್ಥಾಪಕ ಅಧ್ಯಕ್ಷ ಡಾ. ಎಲ್.ಎಚ್ ಬಿದರಿ ಹೇಳಿದರು.

ನಗರದ ಬಿ.ಎಲ್.ಡಿ.ಇ ಎಸ್.ಎಸ್ ಹೈಸ್ಕೂಲ್ ಮೈದಾನದಲ್ಲಿ ಬಿದರಿ ಚೈಲ್ಡ್‌ಅಕಾಡೆಮಿಯ ವತಿಯಿಂದ ಹಮ್ಮಿಕೊಂಡಿದ್ದ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಇಂದಿನ ಮಕ್ಕಳ ಪಠ್ಯಕ್ರಮದಲ್ಲಿ ಬದಲಾವಣೆಗಳಾಗಬೇಕಿದೆ.

ಅವರಿಗೆ ಅಭ್ಯಾಸದ ಜೊತೆ-ಜೊತೆಗೆ ಆಟಕ್ಕೂ ಕೂಡ ಅಷ್ಟೇ ಪ್ರಾಮುಖ್ಯತೆ ನೀಡಬೇಕು. ಕ್ರೀಡೆ ನಮ್ಮ ಬದುಕಿನಲ್ಲಿ ನಮಗೆ ಹೋರಾಟದ ಬಗ್ಗೆ ಕಲಿಸಿ ಕೊಡುತ್ತದೆ. ನಮ್ಮ ಬದುಕಿನಲ್ಲಿ ಕಷ್ಟದ ಸಮಯ ಬಂದಾಗ ಕುಗ್ಗದಿರುವಂತೆ ನಮ್ಮ ಮನೋಬಲವನ್ನು ಹೆಚ್ಚಿಸುತ್ತದೆ. ಅಂತಹ ಶಕ್ತಿ ಕ್ರೀಡೆಗೆ ಇದೆ.

ಆದರೆ ಇಂದಿನ ದಿನಮಾನದಲ್ಲಿ ನಾವೆಲ್ಲರೂ ಅದನ್ನೆ ಕಡೆಗಣಿಸುತ್ತಿರುವುದು ವಿಪರ್ಯಾಸ ಎಂದು ಬೇಸರ ವ್ಯಕ್ತಪಡಿಸಿದರು.

ನೀವೆಲ್ಲರೂ ಸಹ ಪ್ರತಿನಿತ್ಯ ಆಟದಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಳ್ಳುವುದು, ವ್ಯಾಯಮ ಮಾಡುವುದನ್ನು ರೂಢಿಸಿಕೊಳ್ಳಬೇಕು. ಅಂದಾಗ ಮಾತ್ರ ನಿಮ್ಮ ಜೀವನ ಆರೋಗ್ಯಯುತವಾಗಿರುತ್ತದೆ. ಬಿದರಿ ಚೈಲ್ಡ್‌ಅಕಾಡೆಮಿ ವತಿಯಿಂದ ಇಂತಹ ಹಲವಾರು ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿದ್ದು, ಮುಂಬರುವ ದಿನಮಾನಗಳಲ್ಲಿ ಇನ್ನು ಹೆಚ್ಚಿನ ರೀತಿಯಲ್ಲಿ ಕ್ರೀಡೆ ಕುರಿತು ಜಾಗೃತಿ ಮೂಡಿಸುವಂತಹ ಕೆಲಸಗಳನ್ನು ಮಾಡಲಾಗುವುದು ಎಂದರು.

ಸ್ಪರ್ಧೆಯಲ್ಲಿ ಸೋಲು-ಗೆಲುವು ಸಾಮಾನ್ಯ. ಆದರೆ ಇಷ್ಟೊಂದು ಹುಮ್ಮಸ್ಸಿನಿಂದ ನೀವೆಲ್ಲರೂ ಇಷ್ಟೊಂದು ದೊಡ್ಡ ಸಂಖೆಯಲ್ಲಿ ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದು ಸಂತಸದ ವಿಷಯ. ಇದೇ ರೀತಿ ನಿಮ್ಮ ನಿತ್ಯ ಜೀವನದಲ್ಲಿಯೂ ಇದನ್ನು ರೂಢಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

## ರಂಗರಾವ ಅಯ್ಯರ ನಿಧನ



**ಜಮಖಂಡಿ** : ನಗರದ ಸಿದ್ದರಾಮೇಶ್ವರ ಕಾಲನಿಯ ನಿವಾಸಿ ವಿಪ್ರ ಸಮಾಜದ ಹಿರಿಯಜೀವಿ ರಂಗರಾವ ಅಯ್ಯರ (96) ನಿಧನರಾದರು.

ಮೃತರು ಓರ್ವ ಪುತ್ರ, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

## ಕನ್ನಡ ಪುಸ್ತಕ ಪರಿಷತ್ತಿನ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಡಾ. ಪ್ರಕಾಶ ಖಾಡೆ ಆಯ್ಕೆ

**ವಿಜಯಪುರ** : ನಗರದ ಚೇತನಾ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ನಡೆದ ಕನ್ನಡ ಪುಸ್ತಕ ಪರಿಷತ್ ಸಮ್ಮೇಳನದ ಕಾರ್ಯಕಾರಿ ಸಭೆಯಲ್ಲಿ ಕನ್ನಡ ಪುಸ್ತಕ ಪರಿಷತ್ ಸಮ್ಮೇಳನಕ್ಕೆ ಅವಿಭಜಿತ ವಿಜಯಪುರ ಜಿಲ್ಲೆಯ ಬಾಗಲಕೋಟೆಯ ಕವಿ, ಸಂಶೋಧಕ ಡಾ, ಪ್ರಕಾಶ ಖಾಡೆ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಖಾಡೆಯವರು ಕಥೆ, ಕವನ, ಕಾದಂಬರಿ, ಜಾನಪದ ಸಂಗ್ರಹದ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟವಾದ ಕೊಡುಗೆಯನ್ನು ಸಲ್ಲಿಸಿದ್ದಾರೆ. ಸಭೆಯಲ್ಲಿ ಹಿರಿಯ ಸಾಹಿತಿ ಶಂಕರ ಬೈಚಬಾಳ, ಸಿದ್ದಲಿಂಗ ಮನಹಳ್ಳಿ, ವಿಸಂಪಾ ಖೇಡಗಿ, ಸಂಗಮೇಶ ಬಾದಾಮಿ, ಮುರುಗೇಶ ಸಂಗಮ, ಡಿ. ಜೋಶಪ್ಪ, ರಮೇಶ ಕೋಟ್ಯಾಳ, ಸುನಿಲ ಜೈನಾಪುರ, ಅಮರೇಶ ಸಾಲಕ್ಕಿ ಮುಂತಾದವರು ಸಭೆಯಲ್ಲಿದ್ದರು. ಡಿ.1 ರಂದು ನಗರದ ಚೇತನಾ ಕಾಲೇಜ್ ಆವರಣದಲ್ಲಿ ಸಮ್ಮೇಳನ ನಡೆಯಲಿದೆ ಎಂದು ಪರಿಷತ್ತಿನ ಅಧ್ಯಕ್ಷ ಹಿರಿಯ ಸಾಹಿತಿ ಫ.ಗು. ಸಿದ್ದಾಪುರ ಹಾಗೂ ಸಂಚಾಲಕ ಪ್ರೊ, ಅಡವಿಸ್ವಾಮಿ ಕೊಳಮಲಿ ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಲಕೇರಿ: ಜಗನ್ಮಾತಾ ಶ್ರೀ ಕಾಳಿಕಾದೇವಿ ದೇವಸ್ಥಾನ ಭೂಮಿ ಪೂಜಾ ಸಮಾರಂಭ, ಧರ್ಮಸಭೆ

**ವಿಜಯಪುರ** : ಜಿಲ್ಲೆಯ ತಾಳಿಕೋಟೆ ತಾಲೂಕಿನ ಕಲಕೇರಿ ಗ್ರಾಮದಲ್ಲಿ ಶ್ರೀ ಕಾಳಿಕಾದೇವಿ ದೇವಸ್ಥಾನ ಸೇವಾ ಸಮಿತಿ ವತಿಯಿಂದ ಶ್ರೀ ಕಾಳಿಕಾದೇವಿ ದೇವಸ್ಥಾನ ಭೂಮಿ ಪೂಜೆಯನ್ನುಶಾಸಕ ರಾಜೂಗೌಡ ಪಾಟೀಲ ಕುದರಿಸಾಲೋಡಗಿ ನೆರವೇರಿಸಿದರು.



ಬೆಳಿಗ್ಗೆ ವಿಶ್ವಕರ್ಮ ಧ್ವಜಾರೋಹಣ ಹಾಗೂ ಹೋಮ ಪೂಜಾ ಕಾರ್ಯಕ್ರಮ ಬಹಳ ವಿದ್ಯುಕ್ತವಾಗಿ ನಡೆಯಿತು. ನಂತರ ಕಲಕೇರಿ ಆರಾಧ್ಯ ದೈವ ಶ್ರೀ ವೀರಘಂಟಿ ಮಡಿವಾಳೇಶ್ವರ ದೇವಸ್ಥಾನದಿಂದ ಪೂಜ್ಯರನ್ನು ಹಾಗೂ ಗಣ್ಯರನ್ನು ವಿವಿಧ ವೇಧಘೋಷ, ಪೂರ್ಣಕುಂಭ, ಛತ್ರಿ ಚಾಮರ ಹಾಗೂ ವಾದ?ಯ ವೈಭವದೊಂದಿಗೆ ನೂತನ ದೇವಸ್ಥಾನದ ಭೂಮಿ ಪೂಜೆಯ ಸ್ಥಳಕ್ಕೆ ಬಹಳ ಅದ್ದೂರಿಯಾಗಿ ಕರೆ ತರಲಾಯಿತು.

**ಧರ್ಮ ಸಭೆ:** ಈ ವೇಳೆ ಧರ್ಮ ಸಭೆ ಕೂಡಾ ಜರುಗಿತು. ಆಗಮಿಸಿದ ಸ್ವಾಮೀಜಿಯವರು, ರಾಜಕೀಯ ಮುಖಂಡರು, ಹಾಗೂ ಅತಿಥಿಗಳು ಮಾತನಾಡುತ್ತಾ ವಿಶ್ವಕರ್ಮ ಸಮಾಜದ ಕೊಡುಗೆ ಅಪಾರವಾಗಿದೆ. ಇಡೀ ಸಮಾಜದಲ್ಲಿ ನೀರು, ಅಗ್ನಿಯನ್ನು ಪೂಜ್ಯ ಭಾವದಲ್ಲಿ ಕಂಡು ಸೂಕ್ಷ್ಮ ಕೆತ್ತನೆಗಳಲ್ಲಿ ಪರಿಣಿತಿಯನ್ನು ಕಂಡು ಇಡೀ ವಿಶ್ವವೆ ನಿಬ್ಬೆರಾಗುವಂತೆ ಮಾಡಿರುವ ಕೀರ್ತಿ ಈ ಸಮಾಜಕ್ಕೆ ಸಲ್ಲುತ್ತದೆ ಎಂದರು.

ಈ ಕಾಳಿಕಾ ದೇವಸ್ಥಾನದ ಕಟ್ಟಡ ಪೂರ್ಣಗೊಳ್ಳುವವರೆಗೂ ನಿರಂತರವಾಗಿ ಎಲ್ಲರೂ ಸಹಾಯ ಹಸ್ತ ಚಾಚಿ ಮಂದಿರ ಕಟ್ಟಡ ಪೂರೈಸಬೇಕು ಎಂದರು.

ಶಹಾಪುರದ ಶ್ರೀ ವಿಶ್ವಕರ್ಮ ಏಕದಂಡಿಗೆ ಮಠದ ಪೂಜ್ಯ ಶ್ರೀ ಅಜೇಂದ್ರ ಮಹಾಸ್ವಾಮಿಗಳು, ಶಹಾಪುರದ ಶ್ರೀ ವಿಶ್ವಕರ್ಮ ಏಕದಂಡಿಗೆ ಮಠದ ಪೂಜ್ಯ ಶ್ರೀ ಕಾಳ ಹಸ್ತೇಂದ್ರ ಮಹಾಸ್ವಾಮಿಗಳು, ನಾಲತವಾಡದ ಶ್ರೀ ಬ್ರಹ್ಮಾಂಡಬೆರಿ ಮಠದ ಪಂಪಪಾತಿ ಮಹಾಸ್ವಾಮಿಗಳು, ಆಲಮೇಲ -ಸಿಂದಗಿ ಶ್ರೀ ಮೂರು ಝೂವಾಧೀಶ್ವರ ಮಠದ ಶ್ರೀ ರಾಮಚಂದ್ರ ಮಹಾಸ್ವಾಮಿಗಳು, ಬೋರಗಿ ಪುರದಾಳದ ಶ್ರೀ ವಿಶ್ವರಾಧ್ಯ ಬ್ರಹ್ಮ ವಿದ್ಯಾಶ್ರಮದ ಶ್ರೀ ತಪೋರತ್ನಂ ಮಹಾಲಿಂಗೇಶ್ವರ ಮಹಾಸ್ವಾಮಿಗಳು ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದರು.

ಕಲಕೇರಿ ಗುರು ಮರುಳಾರಾಧ್ಯ ಸಂಸ್ಥಾನದ ಶ್ರೀ ಸಿದ್ಧರಾಮ ಶಿವಾಚಾರ್ಯ ಮಹಾಸ್ವಾಮಿಗಳು, ತೆಲಗಿ ವಾಮನ ಮುತ್ಯಾ ಧ್ಯಾನ ಮಂದಿರದ ಬಾಲಯೋಗಿ ವಾಮನರಾವ ಶ್ರೀಧರ ಪತ್ತಾರ, ವಡವಡಗಿಯ ಶ್ರೀ ಕಾಳಿಕಾಂಬ ಶಕ್ತಿಪೀಠದ ಬಾಲಯೋಗಿ ಶ್ರೀ ಗುರುರಾಜ್ ಶಿವಾನಂದ ಶಿಲ್ಪಿ ಸಮ್ಮುಖ ವಹಿಸಿಕೊಂಡಿದ್ದರು.

ವಿಜಯಪುರದ ಅನುಗ್ರಹ ಕಣ್ಣಿನ ಆಸ್ಪತ್ರೆಯ ಮುಖ್ಯಸ್ಥ ಡಾ. ಪ್ರಭುಗೌಡ ಲಿಂಗದಳ್ಳಿ ಜಗನ್ಮಾತೆ ಕಾಳಿಕಾದೇವಿಯ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಈ ವೇಳೆಯಲ್ಲಿ ಮುಖಂಡರಾದ ಇಂಡಿ ಸಹಕಾರ ಇಲಾಖೆಯ ಸಹಾಯಕ ನಿಬಂಧಕ ಕನಕರಾಜ ವಡ್ಡರ, ಸುರೇಶಗೌಡ ಪಾಟೀಲ, ಸಿದ್ದು ಬುಳ್ಳಾ, ಲಕ್ಕಪ್ಪ ಬಡಿಗೇರ, ಅಶೋಕಗೌಡ ಪಾಟೀಲ, ಗ್ರಾಮ ಪಂಚಾಯತಿ ಅಧ್ಯಕ್ಷ ರಾಜಮಹ್ಮದ ಸಿರಸಗಿ, ವಸಂತ ಬಡಿಗೇರ, ವಿಜಯಪುರದ ವಿಶ್ವಕರ್ಮ ಸಮಾಜದ ಅಧ್ಯಕ್ಷ ಬಾಳು ಗಿರಗಾಂವಕರ, ಉಪಾಧ್ಯಕ್ಷರಾದ ಪ್ರಮೋದ ಬಡಿಗೇರ, ಈರಣ್ಣ ಗುರುಬಾಳಪ್ಪ ಪತ್ತಾರ ಸೇರಿದಂತೆ ಅನೇಕರು ಇದ್ದರು.

ಮನೋಹರ ಪತ್ತಾರ ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ಶಿವಾನಂದ ಸಜ್ಜನ ನಿರೂಪಿಸಿ ಹಾಗೂ ಈರಣ್ಣ ಝುಳಕಿ ವಂದಿಸಿದರು.

ಇದೇ ಸಂದರ್ಭದಲ್ಲಿ ಹಲವಾರು ಗಣ್ಯರಿಗೆ ಗುರು ರಕ್ಷೆನೀಡಿ ಗೌರವಿಸಲಾಯಿತು.

ಸಂಜೆ ಕಲಾ ಸಿಂಚನ ಮೆಲೋಡಿಸ್ ವತಿಯಿಂದ ರಸ ಮಂಜರಿ ಕಾರ್ಯಕ್ರಮ ನಡೆಯಿತು.

# ಹೊಳೆ ಸಮುದ್ರ ಗ್ರಾಮದಲ್ಲಿ ಹರಿನಾಥರ ಪಲ್ಲಕ್ಕಿ ಉತ್ಸವ

**ಕಮಲನಗರ :** ಶನಿವಾರ ಬೆಳಗ್ಗೆ ಶ್ರೀ ಸದ್ಗುರು ಹರಿನಾಥಮಹಾರಾಜಮಂದಿರದಿಂದಭಕ್ತರ ಸಮ್ಮುಖದಲ್ಲಿಶ್ರೀಅಲಂಕಾರಮಾಡಿದಪಲ್ಲಕ್ಕಿ ಹೂವುಗಳಿಂದ ಪಲ್ಲಕ್ಕಿಯಲ್ಲಿ ಶ್ರೀ ಸದ್ಗುರು ಹರಿನಾಥ ಮಹಾರಾಜ ಮೂರ್ತಿಯನ್ನು ಕೂಡಿಸಿವಿಶೇಷವಾಗಿ ಸಂಕಲ ವಾದ್ಯ ಮೆರವಣಿಗೆ ಭಜನೆ ಮೇಳಯೊಂದಿಗೆ ಗ್ರಾಮದ ಪ್ರಮುಖ ಬೀದಿಗಳ ಮೂಲಕ ಭಕ್ತರ ಜಯ ಘೋಷಗಳೊಂದಿಗೆ ಸಡಗರ ಸಂಭ್ರಮದಿಂದ ರಾಮ ಮಂದಿರದ ಸಂಭಾಂಗಣಕ್ಕೆ ಬಂದು ತಲುಪಿತು.



ದಾರಿಯುದ್ದಕ್ಕೂ ಪಲ್ಲಕ್ಕಿ ಗೆ ಪೂಜೆ ಸಲ್ಲಿಸಿ ಭಕ್ತಿಯಿಂದ ನಮಸ್ಕರಿಸಿ ಕಾಣಿಕೆ ಸಮರ್ಪಿಸಿದರು.

ಸಭಾಂಗಣದಲ್ಲಿ ಸುಮಾರು ಸಮಯದವರೆಗೆ ಬಾಂರುಡ ಸ್ಪರ್ಧೆ ಕಾರ್ಯಕ್ರಮ ನೆರವೇರಿತು.ಕರ್ನಾಟಕ ಅಲದೆ ಮಾಹಾರಾಷ್ಟದ ಚಾಕೂರ ,ನಳೆಗಾಂವ,ಬಟನಸೂರ ಕಲಾವಿದರು ಆಗಮಿಸಿದರು ಸ್ಪರ್ಧೆಯಲ್ಲಿ ಭಾಗವಹಿಸಿದ ಕಲಾವಿದರಿಗೆ ಸತ್ಕರಿಸಿದರು.ಗ್ರಾಮದ ಸದ್ಧಭಕ್ತರು ಪಾಲ್ಗೊಂಡಿದ್ದರು.

ಸಾಮಾಜಿಕ ಆರ್ಥಿಕ ಸಂಸ್ಕೃತಿಕ ಶೈಕ್ಷಣಿಕ ಕ್ಷೇತ್ರಗಳಲ್ಲಿರುವ ವಿಷಯಗಳನ್ನು ಕುರಿತು ಬಾಂರುಡ ಕಾರ್ಯಕ್ರಮವು ಬಹಳ ವಿಶಿಷ್ಟ ರೀತಿಯಲ್ಲಿ ಜರಗಿತು.

ತದನಂತರ ಊರು ಎದುರುಗಡೆ ಇರುವ ಹನುಮಾನ ಮಂದಿರ ದೇವರಿಗೆ ಆರತಿ ಬೆಳಗುವುದರೊಂದಿಗೆ "ಗೋಪಾಳಕಾಲಾ ಗೊಡರ್ಝಾಲಾ' ಎಂದೆನ್ನುತ್ತಾ ಮತ್ತೆ ಮೆರವಣಿಗೆ ಹರಿನಾಥ ಮಹಾರಾಜ ಮಂದಿರಕ್ಕೆ ತಲುಪಿ ಮುಕ್ತಾಯ ಗೊಳುತ್ತದೆ. ಲಖನಗಾಂವ, ಲಾಸೋನ, ಗುರ್ನಾಳ,ದೇವಣಿ ಚವಣಿಪುರಗಾ,ಅಜನಿ ವಾಗ್ದಾರಿ,ತೊಗರಿ,ಮುರ್ಗ, ಖತಗಾಂವ, ರಾಂಪೂರ, ಬಾಳೂರು,ಮದನೂರ, ಹಕ್ಯಾಳ, ಕಮಲನಗರ,ಕೊಟ್ಯಾಳ,ತೊರಣಾ, ಡಿಗ್ಗಿ ತೋರಣಾವಾಡಿ, ಸಂಗಮ ಖೇಡ ಬೆಳಕುಣಿ(ಭೋ) ಮುಧೋಳ ಮುಧೋಳ (ಬಿ)ಚಂದೂರಿ ತಪಸ್ಯಾಳ ಬೆಳಕುಣಿ ಅಳಂದಿ ಹಲ್ಲಾಳಿ ಚೀಮ್ಮೇಗಾಂವ , ಹೊಂದಿಕೆರ್ ಮುರ್ಕಿ ಮತ್ತು ಸುತ್ತಮುತ್ತಲಿನ ಗ್ರಾಮದ ಭಕ್ತಾದಿಗಳು ಪಾಲ್ಗೊಂಡಿದ್ದರು.

# ವಿಜ್ಞಾನ ಬೆಳದಂತೆ ಜಂಗಮರು ಸತ್ವ ಕಳೆದುಕೊಳ್ಳುತ್ತಿದ್ದಾರೆ

**ಜಮಖಂಡಿ :** ಅಂತರಂಗ-ಬಹಿರಂಗ ಶುದ್ಧತೆ ಹೊಂದಿದವರು ಮಾತ್ರ ನಿಜವಾದ ಜಂಗಮರು. ಸಂಸ್ಕಾರವಂತರು ಮಾತ್ರ ದೇವರನ್ನು ಕಾಣಲು ಸಾಧ್ಯವಿದೆ. ಇಂದಿನ ದಿನಮಾನದಲ್ಲಿ ಪ್ರತಿಯೊಬ್ಬರಿಗೂ ಮಠಮಾನ್ಯಗಳು ಅವಶ್ಯಕ ಆಗಿವೆ ಎಂದು ಶಾಸಕ ನಾಡೋಜ ಡಾ.ಜಗದೀಶ ಗುಡಗುಂಟಿ ಹೇಳಿದರು.

ನಗರದ ಕುಡಚಿ ರಸ್ತೆಯಲ್ಲಿರುವ ಸಾಕ್ಷಾತ್ಕಾರ ಭವನದಲ್ಲಿ ತಾಲೂಕಾ ಜಂಗಮ ಸಮಾಜ ಮತ್ತು ತಾಲೂಕಾ ಜಂಗಮ ನೌಕರರ ಕ್ಷೇಮಾಭಿವೃದ್ಧಿ ಸಂಘ ಹಮ್ಮಿಕೊಂಡಿದ್ದ ಜಂಗಮ ಮಕ್ಕಳ ಪ್ರತಿಭಾ ಪುರಸ್ಕಾರ ಹಾಗೂ ಸ್ಮಮಾನ ಸಮಾರಂಭದಲ್ಲಿ ಮಾತನಾಡಿದರು.

ಜಂಗಮರು ಸಮಾಜದ ಜನರನ್ನು ಉದ್ಧರಿಸುವ ಕೆಲಸದಲ್ಲಿ ತೊಡಗಿಕೊಂಡಿವೆ. ಮಕ್ಕಳಲ್ಲಿ ಗಾಳಿ, ನೀರು, ಭೂಮಿ ರಕ್ಷಣೆಯ ಜಾಗೃತಿ ಮೂಡಿಸುವ ಮೂಲಕ ಪಾಲಕರು ಪಾಲಿಸಬೇಕು. ವಿಜ್ಞಾನ ಬೆಳದಂತೆ ಜಂಗಮರು ಸತ್ವ ಕಳೆದುಕೊಳ್ಳುತ್ತಿದ್ದಾರೆ. ಮೊಬೈಲ್ ಮತ್ತು ಟಿ.ವಿ. ಅತೀಯಾದ ಬಳಕೆಯಿಂದ ಮಾನವೀಯ ಸಂಬಂಧಗಳು ಕಡಿಮೆ ಆಗುತ್ತಿವೆ ಎಂದರು.

ತಂತ್ರಜ್ಞಾನ ಬೆಳದಂತೆ ಓದುವ, ಬರೆಯುವ ಆಸಕ್ತಿ ಕಡಿಮೆಯಾಗುತ್ತಿದೆ. ಕುಟುಂಬಗಳ ನಡುವೆ ಅಂತರ ಹೆಚ್ಚಾಗುತ್ತಿದೆ. ಗುರುವಿನ ಆಸಕ್ತಿ ಅನುಗುಣವಾಗಿ ವಿದ್ಯಾರ್ಥಿಗಳು ಅಧ್ಯಯನದಲ್ಲಿ ತೊಡಗಿಕೊಂಡಿರೇ ಮಾತ್ರ ವಿದ್ಯಾರ್ಥಿ ಜೀವನ ಉಜ್ವಲವಾಗಲಿದೆ. ಭವ್ಯ ಭಾರತ ನಿರ್ಮಾಣಕ್ಕೆ ಸಶಕ್ತ ವಿದ್ಯಾರ್ಥಿಗಳ ಸಾಧನೆಗಳು ಅವಶ್ಯಕ. ಇಂದಿನ ದಿನದಲ್ಲಿ ಗುರುವಿನ ಮತ್ತು ವಿದ್ಯಾರ್ಥಿ ಬಯಕೆ ಒಂದೇ ಆಗಬೇಕಾಗಿದೆ. ಆತ್ಮನಿರ್ಭರ ಮೂಲಕ ಭಾರತ ದೇಶ ವಿಶ್ವದಲ್ಲಿ ಆರ್ಥಿಕ ಸಾಮರ್ಥ್ಯ ಜೊತೆಗೆ ಬಲಿಷ್ಠ ರಾಷ್ಟ್ರಗಳಲ್ಲಿ ಸೇರ್ಪಡೆಗೊಳ್ಳುತ್ತಿರುವದು ಹೆಮ್ಮೆ ಎನ್ನಿಸುತ್ತಿದೆ ಎಂದರು.

ಬೆಂಗಳೂರಿನ ಖ್ಯಾತ ಸಾಹಿತಿ, ಚಲನಚಿತ್ರ ಪುರಸ್ಕೃತ ಡಾ.ರಾಜಶೇಖರ ಮಠಪತಿ (ರಾಗಂ) ಮಾತನಾಡಿ, ಕೊಡುವ ಯೋಗ್ಯತೆ ಇರತಕ್ಕ ವ್ಯಕ್ತಿ ಹತ್ತಿರ ಸಹಾಯ ನಿರೀಕ್ಷೆ ಮಾಡಬೇಕು. ಸಾಧನೆ ನಂತರವೂ ಸಾಧಿಸುವದು ಬಹಳಷ್ಟಿದೆ. ಬದುಕು ಕಟ್ಟಿಕೊಂಡವರು, ಕಟ್ಟಿಕೊಳ್ಳುವರು ನಡತೆ ಉತ್ತಮ ಆಗಿರಬೇಕು. ಪಂಚಪೀಠಗಳು ನಮಗೆ ಉತ್ತಮ ಸಾಹಿತ್ಯ ನೀಡಿಲ್ಲ. ಜನೇವರಿ ತಿಂಗಳಲ್ಲಿ ಆಂದ್ರಪ್ರದೇಶ ಮುಖ್ಯಮಂತ್ರಿಗಳು ಪೂಜ್ಯ ಸಿದ್ದೇಶ್ವರ ಶ್ರೀಗಳ ಕುರಿತು ಯೋಗಸ್ಥ 6ನೇ ಆವೃತ್ತಿ ಆಂಧ್ರಭಾಷೆಯಲ್ಲಿ ಬಿಡುಗಡೆಯಾಗಲಿದೆ ಎಂದರು.

ಇದೇ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ., ಪಿಯುಸಿ ಮತ್ತು ಪದವಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ 148 ವಿದ್ಯಾರ್ಥಿಗಳನ್ನು ಸನ್ಮಾನಿಸುವ ಮೂಲಕ ಪ್ರಶಸ್ತಿ ಸಹಿತ ಒಂದು ಸಾವಿರ ನಗದು ಬಹುಮಾನ ನೀಡಲಾಯಿತು. ವಿಶೇಷ ಸನ್ಮಾನಿತರಾದ ಚಿಕ್ಕಮಕ್ಕಳ ತಜ್ಞ ಪ್ರಭಯ್ಯ ಗುರುಮಠ, ಸ್ತ್ರೀರೋಗ ತಜ್ಞೆ ಪ್ರತಿಭಾ ಗುರುಮಠ, ಅರವಳಿಕೆ ತಜ್ಞ ಮಠಂ ಶಿವಕುಮಾರ, ಸ್ತ್ರೀರೋಗ ತಜ್ಞೆ ವಾಣಿಶ್ರೀ ಮಹಾಲಿಂಗಪೂರಮಠ ಅವರನ್ನು ಸನ್ಮಾನಿಸಲಾಯಿತು.

ಹಿರಿಯ ಖ್ಯಾತವೈದ್ಯ ಡಾ.ಕೆ.ಐ.ಗುರುಮಠ ಕಾರ್ಯಕ್ರಮ ಉದ್ಘಾಟಿಸಿದರು. ನಗರದ ಕಲ್ಯಾಣಮಠದ ಗೌರಿಶಂಕರ ಶಿವಾಚಾರ್ಯರು, ಮರೆಗುದ್ದಿಯ ಅಡವಿಸಿದ್ದೇಶ್ವರ ಮಶದ ಡಾ.ನಿರುಪಾಧೀಶ್ವರಶ್ರೀ, ಹಿರೇಪಡಸಲಗಿ ಹಿರೇಮಠದ ಸಿದ್ಧಲಿಂಗ ಶಿವಾಚಾರ್ಯರು, ಮುತ್ತಿನಕಂತಿ ಹಿರೇಮಠದ ಪಂಡಿತಾರಾಧ್ಯ ಶಿವಲಿಂಗ ಶಿವಾಚಾರ್ಯರು, ಕೊಣ್ಣೂರಿನ ಹೊರಗಿನಮಠದ ಡಾ.ವಿಶ್ವಪ್ರಭುದೇವರು ಸಾನಿಧ್ಯ ವಹಿಸಿದ್ದರು. ವೇದಿಕೆಯಲ್ಲಿ ಜಂಗಮ ಸಮಾಜದ ಹಿತರಕ್ಷಣಾ ಸಮಿತಿ ಅಧ್ಯಕ್ಷ ಶಿವಪುತ್ರಯ್ಯ ಸಿದಗಿರಿಮಠ, ಆರ್.ಎಸ್.ಅಕ್ಕಿ, ಅಶೋಕ ಗಾವಿ, ಜಿ.ಕೆ.ಮಠದ, ಡಾ.ಮಲ್ಲು ಮಠ, ಶಂಕ್ರಯ್ಯ ಕರಡಿಮಠ, ಬಸಲಿಂಗಯ್ಯ ಬೃಂಗಿಮಠ, ಕಾಡಯ್ಯ ಹಿರೇಮಠ, ಎಂ.ಕೆ.ಹಿಟ್ಟಿನಮಠ, ಸಾಹಿತಿ ಬಸವರಾಜ ಕಡ್ಡಿ ಸಹಿತ ಹಲವರು ಇದ್ದರು.

# ಪಿಎಂ ಇಂಟರ್ನ್‌ಶಿಪ್ ಸ್ಕೀಮ್‌ನಲ್ಲಿ ನೋಂದಣಿ ಮಾಡಿಕೊಳ್ಳಿ

**ಕೊಪ್ಪಳ :** ಜಿಲ್ಲೆಯ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳು ಪ್ರೈಮ್ ಮಿನಿಸ್ಟರ್ಸ್ ಇಂಟರ್ನ್‌ಶಿಪ್ ಸ್ಕೀಮ್‌ನಲ್ಲಿ ನೋಂದಣಿ ಮಾಡಿಕೊಳ್ಳುವಂತೆ ಕೊಪ್ಪಳ ಸರಕಾರಿ ಐಟಿಐ ಪ್ರಾಚಾರ್ಯರು ತಿಳಿಸಿದ್ದಾರೆ.

ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಕೊಪ್ಪಳ (ಟಣಕನಕಲ್ ಕುಷ್ಟಗಿ ರಸ್ತೆ ಕೊಪ್ಪಳ) ಇಲ್ಲಿ ಪ್ರಧಾನ ಮಂತ್ರಿಗಳ ಇಂಟರ್ನ್ ಶಿಪ್ ಯೋಜನೆಯಡಿ ನೋಂದಣಿ ಮಾಡಿಕೊಳ್ಳಲು ನೆರವಿನ ಘಟಕ (ಹೆಲ್ಪ್ ಡೆಸ್ಕ್) ಸ್ಥಾಪಿಸಲಾಗಿರುತ್ತದೆ. 21 ರಿಂದ 24 ವರ್ಷ ವಯೋಮಾನದ ನಿರುದ್ಯೋಗಿ ಯುವಕರು ಇದರ ಸದುಪಯೋಗ ಪಡೆದುಕೊಳ್ಳಬೇಕು. ಕೊಪ್ಪಳ ಜಿಲ್ಲೆ ಹಾಗೂ ಸುತ್ತ ಮುತ್ತಲಿನ ಎಲ್ಲಾ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳು ಪೋರ್ಟಲ್ https://pminternship.mca.gov.in/login ಮುಖಾಂತರ ನೋಂದಣಿ ಮಾಡಿಕೊಳ್ಳಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಶರಣರು ಸಮ ಸಮಾಜದ ಚಿಂತಕರು: ಪ್ರೊ. ಲಕ್ಷ್ಮೀ ಮೋರೆ



**ವಿಜಯಪುರ :** ಕನ್ನಡ ನಾಡು ನುಡಿಯ ಮೂಲಕ ಜನ ಸಾಮಾನ್ಯರಲ್ಲಿ ಅನುಭವಗಳಿಂದ ಕೂಡಿದ ಚಿಂತನಾತ್ಮಕ ಉಪನ್ಯಾಸಗಳನ್ನು ನಡೆಸಿ ನಾವು ನೀವೆಲ್ಲ ಪುನೀತರಾಗುವಲ್ಲಿ ದತ್ತಿ ಗೋಷ್ಠಿಗಳ ಪಾತ್ರ ಮಹತ್ವದ್ದು. ಆದರೆ, ದತ್ತಿ ಗೋಷ್ಠಿಗಳನ್ನು ನಡೆಸುವಲ್ಲಿ ದತ್ತಿ ದಾನಿಗಳ ಕಾರ್ಯ ಶ್ಲಾಘನೀಯ ಎಂದು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯದ ಕನ್ನಡ ಪ್ರಾಧ್ಯಾಪಕಿ ಲಕ್ಷ್ಮೀ ಮೋರೆ ಅಭಿಪ್ರಾಯಪಟ್ಟರು.

ಭಾನುವಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಜರುಗಿದ ದಿ. ಪ್ರಭಾವತಿ ಮಲ್ಲಪ್ಪ ಪಟ್ಟಣಶೆಟ್ಟಿ ದತ್ತಿ. ದತ್ತಿ ದಾನಿಗಳು ಶ್ರೀ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ಮಾಜಿ ಸಚಿವರು, ವಿಜಯಪುರ. ವಿಷಯ: 12ನೇ ಶತಮಾನದ ಶರಣರ ಸಂದೇಶಗಳು. ಹಾಗೂ ಶ್ರೀಮತಿ ಶಾಂತಾಬಾಯಿ ಎಸ್ ಗುಂಡಳ್ಳಿ. ದತ್ತಿ ದಾನಿಗಳು ಶ್ರೀ ಶಾಂತಮಲ್ಲ ಹೊನ್ನಪ್ಪ ಗುಂಡಳ್ಳಿ, ವಿಜಯಪುರ. ವಿಷಯ: ವಚನ ಸಾಹಿತ್ಯದ ಕುರಿತು ಚಿಂತನೆ ಎಂಬ ಎರಡು ದತ್ತಿ ಗೋಷ್ಠಿಗಳ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡುತ್ತಾ, ದತ್ತಿ ದಾನಿಗಳ ನಿಸ್ವಾರ್ಥ ಸೇವೆಯನ್ನು ಸ್ಮರಿಸುತ್ತಾ, 12ನೇ ಶತಮಾನದ ಶರಣರು ಸಮ ಸಮಾಜದ ಚಿಂತಕರಾಗಿದ್ದರು ಎಂದರು.

ಅಧ್ಯಕ್ಷತೆ ವಹಿಸಿದ್ದ ಸುಜಾತಾ ಈರಣ್ಣ ಪಟ್ಟಣಶೆಟ್ಟಿಯವರು ಮಾತನಾಡುತ್ತಾ ದತ್ತಿ ಗೋಷ್ಠಿಗಳ ಮೂಲಕ ಹಿರಿಯರ ಸ್ಮರಣೆ ಮಾಡುವುದು ನಿಜಕ್ಕೂ ನಮಗೆ ಒಂದು ಹಬ್ಬವಿದ್ದಂತೆ. ಈ ಹಿರಿಯರ ಹಬ್ಬದಲ್ಲಿ ಇಂದು ನಾವೆಲ್ಲ 12ನೇ ಶತಮಾನದ ಶರಣರು ಕಾಯಕ, ದಾಸೋಹಗಳಿಗೆ ನೀಡಿದ ಮಹತ್ವವನ್ನು ನಾವೆಲ್ಲರೂ ನಮ್ಮ ಜೀವನದಲ್ಲಿ ಅರಿತುಕೊಂಡು ಬಾಳುವುದು ಅತ್ಯಂತ ಮಹತ್ವದ ಸಂಗತಿ ಎಂದರು.

"12ನೇ ಶತಮಾನದ ಶರಣರ ಸಂದೇಶಗಳು" ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದ ಶಿಕ್ಷಕ– ಸಾಹಿತಿಗಳಾದ ಸಂತೋಷ ಬಂಡೆಯವರು ಮಾತನಾಡುತ್ತಾ ನಡೆ–ನುಡಿಗಳನ್ನು ಒಂದಾಗಿಸಿ ನಮಗೆಲ್ಲ ಬದುಕಿನ ದಾರಿಯನ್ನು ತೋರಿಸಿಕೊಟ್ಟು ಹೋದ ಶರಣರ ಸಂದೇಶಗಳನ್ನು ಮೆಲುಕು ಹಾಕುತ್ತಾ "ಅರಿತರೆ ಶರಣ ಮರೆತರೆ ಮಾನವ" ಎಂಬುದನ್ನು ನಾವು ಮರೆಯಬಾರದು ಎಂದರು.

"ವಚನ ಸಾಹಿತ್ಯದ ಕುರಿತು ಚಿಂತನೆ" ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದ ಸಾಹಿತಿ ಸುಜಾತಾ ಹ್ಯಾಳದರವರು ಮಾತನಾಡುತ್ತಾ, ವಚನಗಳ ತಾತ್ಪರ್ಯವನ್ನು ತಿಳಿದುಕೊಂಡು ಉತ್ತಮ ಜೀವನವನ್ನು ಸಾಗಿಸಿದಾಗ ಮಾತ್ರ ನಾವೆಲ್ಲರೂ ನೆಮ್ಮದಿಯಿಂದ ಇರಲು ಸಾಧ್ಯ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಎ.ಎಂ.ಹಳ್ಳೂರ, ಸುರಮ್ಮಾ ಪಾಟೀಲ, ಎಂ.ಜಿ.ಮೋಟಗಿ, ಸರ್ವಾನಂದ ಕೂಬರಡ್ಡಿ, ರವಿ ಬಿರಾದಾರ ಮಾತನಾಡಿದರು. ಇದೇ ಸಂದರ್ಭದಲ್ಲಿ ದೇವರ ಹಿಪ್ಪರಗಿಯ ಮುರಾರ್ಜಿ ವಸತಿ ಶಾಲೆಯ ಸಹ ಶಿಕ್ಷಕ ರಾಜಶೇಖರ ಕಂಬಾರ ಅವರನ್ನು ವಿಶೇಷವಾಗಿ ಸನ್ಮಾನಿಸಲಾಯಿತು.

ಶಶಿಕಲಾ ನಾಯ್ಕೋಡಿ ಪ್ರಾರ್ಥಿಸಿದರು. ಸುರೇಶ ಜತ್ತಿ ಸ್ವಾಗತಿಸಿ ಗೌರವಿಸಿದರು. ಡಾ. ಮಾಧವ ಗುಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಗುರುದೇವಿ ಬಿರಾದಾರ ನಿರೂಪಿಸಿದರು. ವಿಜಯಲಕ್ಷ್ಮಿ ಹಳಕಟ್ಟಿ ವಂದಿಸಿದರು. ಮೆಹತಾಬ ಕಾಗವಾಡ ತತ್ವಪದವನ್ನು ಹಾಡಿ ರಂಜಿಸಿದರು.

ಕಾರ್ಯಕ್ರಮದಲ್ಲಿ ಕಸಾಪ ಅಧ್ಯಕ್ಷ ಹಾಸಿಂಪೀರ ವಾಲೀಕಾರ, ಕೋಶಾಧ್ಯಕ್ಷ ಡಾ. ಸಂಗಮೇಶ ಮೇತ್ರಿ, ಕೆ.ಎಸ್. ಹಣಮಾಣಿ, ರಾಜೇಸಾಬ ಶಿವನಗುತ್ತಿ, ಡಾ. ಸುರೇಶ ಕಾಗಲಕರರೆಡ್ಡಿ, ಶ್ರೀಕಾಂತ ನಾಡಗೌಡ, ದ್ಯಾಮನಗೌಡ ಪಾಟೀಲ, ಕೀರ್ತಿ ಭಜಂತ್ರಿ, ಲತಾ ಗುಂಡಿ, ಗಂಗಮ್ಮ ರೆಡ್ಡಿ, ರಾಮಗೊಂಡ ಪಡನಾಡ, ಎಂ.ಡಿ ಬಿಳಿಜಾಡರ, ರಹಿಂಮಲೀಕ ಹಳ್ಳೂರ, ಶಾಂತಾ ವಿಭೂತಿ, ಎಸ್.ಎಂ. ಬಿರಾದಾರ, ಫಕ್ರುದ್ದಿನ್ ಹಿರೇಕೊಪ್ಪ ಉಪಸ್ಥಿತರಿದ್ದರು.

# ದಾಸ ಶ್ರೇಷ್ಠರಾದ ಭಕ್ತ ಕನಕದಾಸರ ಜಯಂತಿ ಆಚರಣೆ

**ಜಮಖಂಡಿ :** ಸರಕಾರಿ ಪ್ರಥಮದರ್ಜೆ ಮಹಿಳಾ ಕಾಲೇಜು, ಜಮಖಂಡಿ ಇಲ್ಲಿ ದಾಸ ಶ್ರೇಷ್ಠರಾದ ಭಕ್ತ ಕನಕದಾಸರ ಜಯಂತಿ ಉತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾದಪ್ರೊ.ಮೌನೇಶ ಬಡಿಗೇರಇವರುಮ ಾತನಾಡುತ್ತಾಕನಕದಾಸರನ್ನು ಮತ್ತು ಪುರಂದರದಾಸರನ ್ನುಕರ್ನಾಟಕಕೀರ್ತನ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ಬನ್ನಿಸಲಾಗಿದೆ. ಭಕ್ತಕನಕದಾಸರುತಮ್ಮಕೀರ್ತನೆ ಸಾಹಿತ್ಯದ ಮೂಲಕ ಸಮಾಜದಅಸಮಾನತೆಯನ್ನುತ ೊಡೆದು ಹಾಕಿ ಸಮ ಸಮಾಜದಕನಸನ್ನುಕಂಡವರು. ಹಾಗೂ ಸಮಾಜದ ಓರೆಕೋರೆಗಳನ್ನು ತೆಗೆದು ಭಾತೃತ್ವ ಸಮಾಜದಕನಸನ್ನುಕಂಡ ಮಹಾನ್‌ಚೇತನಕನಕದಾಸರುಆಗಿದ್ದಾರೆ. ಅಷ್ಟೇ ಅಲ್ಲಕನ್ನಡ ಸಾಹಿತ್ಯ ಲೋಕ ಹಾಗೂ ಸಂಗೀತ ಲೋಕಕ್ಕೆ ತಮ್ಮದೇಆದ ಕೊಡುಗೆಗಳನ್ನು ವಿವಧ ರೂಪಗಳಲ್ಲಿ ನೀಡಿದವರಾಗಿದ್ದಾರೆ.

ಇವರು ಮೋಹನ ತರಂಗಿಣಿ, ನಳ ಚರಿತ್ರೆ, ರಾಮಧಾನ್ಯಚರಿತೆ, ಹರಿಭಕ್ತ ಸಾರ, ಮೊದಲಾದ ಮಹಾಕಾವ್ಯಗಳನ್ನು ರಚಿಸಿದ್ದಾರೆ. ತಮ್ಮಕೀರ್ತನೆಯ ಮೂಲಕ ಭತ್ತ ಮತ್ತುರಾಗಿಯ ನಡುವಿನ ಸಂಭಾಷಣೆಯ ಮೂಲಕ ರಾಗಿ ಹೇಗೆ ತನ್ನಔನ್ನತ್ಯವನ್ನು ಸಾಬೀತು ಪಡಿಸುತ್ತಿದೆ ಹಾಗೂ ರಾಮಧಾನ್ಯವೆಂಬ ಹೆಸರು ಪಡೆಯುತ್ತಿದೆಎಂಬುದನ್ನು ನಿರೂಪಿಸಿದ್ದಾರೆ.

ಕಾರ್ಯಕ್ರಮದಅಧ್ಯಕ್ಷತೆಯನ್ನು ವಹಿಸಿಕೊಂಡು ಮಾತನಾಡಿದ ಪ್ರಾಂಶುಪಾಲರಾದಡಾ. ಶ್ರೀಮತಿ ಸುನಂದಾಎಸ್. ಶಿರೂರ ಇವರು ಭಕ್ತಕನಕದಾಸರ ಚಿಂತನೆಗಳು ವಿಶ್ವಮಾನ್ಯವಾಗಿವೆ. ಭಕ್ತಿಪಂಥದ ಮೂಲಕ ಸಾಮಾಜಿಕ ಹಾಗೂ ಧಾರ್ಮಿಕ ಶ್ರೇಯೋಭಿವೃದ್ಧಿಗೆಕನಕದಾಸರು ನೀಡಿದೆಕೊಡುಗೆಅತ್ಯಂತ ಅಪಾರವಾಗಿವೆ.

ಅವರ ಕೀರ್ತನೆಗಳಲ್ಲಿ ಸಾಮಾಜಿಕ ಕಳಕಳಿ ಇದೆ. ಭಗವಂತ ನಾಮ ಸ್ಮರಣೆಯಲ್ಲಿಅಪಾರ ಶಕ್ತಿ ಅಡಗಿದೆ. ಶರಣದಾಸರತತ್ವ ಚಿಂತನೆಗಳ ಅನುಷ್ಠಾನವಾಗಬೇಕಿದೆ. ಈ ಹಿನ್ನಲೆಯಲ್ಲಿ ಪ್ರತಿಯೊಬ್ಬರುದಾಸಶ್ರೇಷ್ಠರಾದ ಭಕ್ತಕನಕದಾಸರ ವಿಚಾರ ಧಾರೆಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಅವಶ್ಯವಾಗಿದೆಎಂದು ಹೇಳಿದರಲ್ಲದೆ12ನೇ ಶತನಮಾನದಲ್ಲಿಜಗಜ್ಯೋತಿ ಬಸವ ಣ್ಣನವರುಇವನಾರವಇವನಾರವ ಎಂದೆನಿಸಿದರಯ್ಯ ಇವ ನಮ್ಮವ ಇವ ನಮ್ಮವ ಇವ ನಮ್ಮ ಮನೆಯ ಮಗನೆಂದೆನಿಸಯ್ಯಎಂದು ಹೇಳಿದಂತೆಯೆ 15ನೇ ಶತಮಾನದಲ್ಲಿ ಸಂತ ಶ್ರೇಷ್ಠ ಭಕ್ತಕನಕದಾಸರುತಮ್ಮ ಕೀರ್ತನೆಗಳಲ್ಲಿ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮಕುಲದನೆಲೆಯಏನಾದರು ಬಲ್ಲಿರಾ ಬಲ್ಲಿರಾಎಂದು ಹೇಳುವುದರ ಮೂಲಕ ಸಮಾಜದಲ್ಲಿ ಹುಟ್ಟಿದ ಪ್ರತಿಯೊಬ್ಬರು ಸಮಾನರು. ಈ ಹಿನ್ನಲೆಯಲ್ಲಿ ಪ್ರತಿಯೊಬ್ಬರು ಹುಟ್ಟಿನಿಂದ ಶ್ರೇಷ್ಠರು, ಯಾರು ಮೇಲಲ್ಲ, ಯಾರೂ ಕೀಳಲ್ಲ ಎಂಬ ಸಂದೇಶವನ್ನು ಸಾರಿದ್ದಾರೆಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹಿರಿಯ ಪ್ರಾಧ್ಯಾಪಕರಾದಡಾ. ಎಮ್.ಎಮ್. ಮಂಟೂರ, ಶ್ರೀ ಅಪ್ಪಣ್ಣ ಪೂಜಾರಿ, ಶ್ರೀಮತಿ ಶಿವಲೀಲಾ, ಶ್ರೀ ಉಮೇಶ ದೇಸಾಯಿ, ಶ್ರೀ ರಾಜೇಶಜಾಧವ,ಶ್ರೀ ಡಿ.ಬಿ. ಚನ್ನಪ್ಪಗೋಳ, ಡಾ. ಜಯಮ್ಮಾ, ಡಾ. ಅಶ್ವಿನಿ ಬಬಲಿ, ಡಾ. ಆರ್.ಎ. ಸಂಗಣ್ಣವರ, ಶ್ರೀ ಆರ್.ಎಲ್. ಚವ್ಹಾಣ, ಶ್ರೀ ಎಸ್.ಎಮ್. ಗುಡಿ, ಶ್ರೀಮತಿ ಸುಜಾತಾ ಬಸಪ್ಪಗೋಳ ಮತ್ತಿತ್ತರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಸಾಂಸ್ಕೃತಿಕಘಟಕದಕಾರ್ಯಾಧ್ಯಕ್ಷರಾದಡಾ. ಅರುಣ ಕಾಂಬಳೆ ಇವರು ಸ್ವಾಗತಿಸಿದರು. ಶ್ರೀ ಎಸ್.ಪಿ. ಆಲಗೂರ ವಂದಿಸಿದರು. ಶ್ರೀ ರಾಜೇಶಜಾಧವಕಾರ್ಯಕ ್ರಮವನ್ನು ನಿರೂಪಿಸಿದರು.

# ಪ್ರತಿ ಮೂರು ವರ್ಷಕ್ಕೊಮ್ಮೆ: ಗ್ರಾಮ ದೇವತೆ ಜಾತ್ರೆ ಶ್ರದ್ಧಾ–ಭಕ್ತಿಯ ಉತ್ಸವ, ಸರನಾಡಗೌಡ ಡಿ. 20 ರಿಂದ ನಗರದ ಕಿಲ್ಲಾ ಓಣಿಯ ಗ್ರಾಮದೇವಿ ಜಾತ್ರಾ ಮಹೋತ್ಸವ



**ಬಾಗಲಕೋಟೆ:** ಪ್ರತಿ ಮೂರು ವರ್ಷಕ್ಕೊಮ್ಮೆ ನಡೆಯುವ ಬಾಗಲಕೋಟೆ ನಗರದ ಕಿಲ್ಲ ಓಣಿಯ ಶ್ರೀ ಗ್ರಾಮದೇವಿ ಜಾತ್ರಾ ಮಹೋತ್ಸವ ಈ ಬಾರಿ ಡಿಸೆಂಬರ್ 20 ರಿಂದ 5 ದಿನಗಳ ಕಾಲ ವಿಜೃಂಭಣೆಯಿಂದ ನಡೆಯಲಿದೆ ಎಂದು ಸೇವಾ ಸಮಿತಿ ಗೌರವ ಅಧ್ಯಕ್ಷ ಬಸವ ಪ್ರಭು ಸರನಾಡಗೌಡ ತಿಳಿಸಿದರು. ಮಂಗಳವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ, ಉದ್ದೇಶಿಸಿ ಮಾತನಾಡಿದ ಅವರು ಡಿ. 20 ಬೆಳಿಗ್ಗೆ ಎಂಟು ಗಂಟೆಗೆ ದೇವಿ ಧ್ವಜಾರೋಹಣ, ಗೋಪೂಜೆ ಹಾಗೂ ಕುಂಭ ಪೂಜೆ ದ್ಯಾಮವ್ವದೇವಿ ದೇವಸ್ಥಾನದಲ್ಲಿ ನಡೆಯಲಿದೆ. 9–30 ರಿಂದ 400 ವಿವಿಧ ಕಲಾತಂಡ ಹಾಗೂ ಮಂಗಲ ವಾದ್ಯಗಳೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಶ್ರೀದೇವಿಯ ಭವ್ಯ ಮೆರವಣಿಗೆ ನಡೆಯಲಿದೆ, ಬಳಿಕ ಶ್ರೀದೇವಿಯನ್ನು ಸುಮಂಗಲೆಯರು ಆರತಿಯೊಂದಿಗೆ ದೇವಸ್ಥಾನಕ್ಕೆ ಬರ ಮಾಡಿಕೊಳ್ಳುವರು. ಮೆರವಣಿಗೆಯಲ್ಲಿ 2500 ಮಹಿಳೆಯರು ಪೂರ್ಣ ಕುಂಭ ಹೊತ್ತು ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಐದು ದಿನಗಳ ಕಾಲ ದೇವಿಗೆ ವಿಶೇಷ ಪೂಜಾ ಕೈಂಕರ್ಯಗಳು ನಡೆಯಲಿದೆ. ಪ್ರತಿದಿನ ಸಂಜೆ ನಗರದ ಕಾಯಿಪಲ್ಲೆ ಮಾರ್ಕೆಟ್ ಹತ್ತಿರ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು, ಭಜನೆ, ಪ್ರವಚನಗಳು, ಅನ್ನಸಂತರ್ಪಣೆ ಜರುಗಲಿದೆ. ಡಿ.24ರಂದು ಶ್ರೀದೇವಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಲಿದೆ. ನ. 26 ರಿಂದ ಐದು ವಾರಗಳ ಕಾಲ ವಾರ ಹಿಡಿಯಲಾಗುವುದು. ಈ ಜಾತ್ರಾ ಮಹೋತ್ಸವವು ಕೇವಲ ಧಾರ್ಮಿಕ ಆಚರಣೆಯೆಲ್ಲ. ಬಾಗಲಕೋಟೆಯ ಸಾಂಸ್ಕೃತಿಕ ಪರಂಪರೆಯ ಪ್ರತೀಕವಾಗಿದೆ. ಈ ಮಹೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಜಾತ್ರೆಯನ್ನು ಯಶಸ್ವಿ ಗೊಳಿಸಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ಪದಾಧಿಕಾರಿಗಳಾದ ಅಶೋಕ ಲಿಂಬಾವಳಿ, ಬಂಡೇರಾವ ಸರದೇಸಾಯಿ, ಗುಂಡೂರಾವ್ ಸಿಂಧೆ, ಸಂಗಯ್ಯ ಸರಗಣಾಚಾರಿ, ಸದಾನಂದ ನಾರಾ, ಬಸಪ್ಪ ಸ್ವಾಗಿ, ನಾಗರಾಜ ಹದ್ಲಿ, ಸುರೇಶ ಮಜ್ಜಗಿ, ಶ್ರೀನಿವಾಸ ಸಜ್ಜನ ಸೇರಿದಂತೆ ಇತರರು ಇದ್ದರು.

# 87ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಸಾಹಿತಿ ಗೊ.ರು ಚನ್ನಬಸಪ್ಪ ಆಯ್ಕೆ



ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ (Kannada Sahithya Sammelana) ಅಧ್ಯಕ್ಷರಾಗಿ ಹಿರಿಯ ಸಾಹಿತಿ ಗೊ.ರು ಚನ್ನಬಸಪ್ಪ (ಗೊ.ರು.ಚ) (Go.Ru Channabasappa) ಅವರು ಆಯ್ಕೆಯಾಗಿದ್ದಾರೆ.ಜಾನಪದ ವಿದ್ವಾಂಸರಾದ ಇವರು ಕರ್ನಾಟಕ ಪ್ರಗತಿಪಥ, ಸಾಕ್ಷಿಕಲ್ಲು, ಬಾಗೂರು ನಾಗಮ್ಮ, ಗ್ರಾಮಗೀತೆಗಳು, ಕರ್ನಾಟಕ ಜನಪದ ಕಲೆಗಳು, ಹೊನ್ನ ಬಿತ್ತೇವು ನೆಲಕೆಲ್ಲ ಮೊದಲಾದ ಕೃತಿಗಳನ್ನು ಅವರು ರಚಿಸಿದ್ದಾರೆ.

ಗೊ.ರು ಚನ್ನಬಸಪ್ಪ ಅವರು ಈ ಹಿಂದೆ 1992 ರಿಂದ 1995 ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಕೊಪ್ಪಳ (1993), ಮಂಡ್ಯ (1994) ಮತ್ತು ಮುಧೋಳದಲ್ಲಿ (1995)ರಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆ.

ಸಂಘಟಕರಾಗಿದ್ದ ಗೊ.ರು ಚನ್ನಬಸಪ್ಪ ಅವರು ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಗೊಂಡೇದಹಳ್ಳಿಯಲ್ಲಿ ರುದ್ರಪ್ಪಗೌಡರು–ಅಕ್ಕಮ್ಮ ದಂಪತಿಗಳಿಗೆ ಪುತ್ರರಾಗಿ ಮೇ 18 1930 ರಂದು ಜನಿಸಿದರು. ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ್ದ ಇವರು 18ನೇ ವಯಸ್ಸಿನಲ್ಲೇ ಸರ್ಕಾರಿ ಶಾಲೆಯಲ್ಲಿ ಶಿಕ್ಷಕರಾಗಿ ವೃತ್ತಿಗೆ ಸೇರಿದರು. ಸರ್ಕಾರಿ ಸೇವೆಯ ಜೊತೆಗೆ ವಿವಿಧ ಸಂಘ ಸಂಸ್ಥೆಗಳಿಗಾಗಿ ದುಡಿದಿದ್ದಾರೆ. ಗಾಂಧೀ ಗ್ರಾಮದಲ್ಲಿ ಸಮಾಜ ಶಿಕ್ಷಣವನ್ನು ಪಡೆದ ಅವರು ಭೂದಾನ ಚಳವಳಿ, ವಯಸ್ಕರ ಶಿಕ್ಷಣ, ಸೇವಾದಳಗಳಲ್ಲಿ ಕೆಲಸ ಮಾಡಿದ್ದಾರೆ. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಹೆಡ್‌ಕ್ವಾಟರ್ಸ್ ಕಮಿಷನರ್ ಆಗಿ ಕೆಲಸಮಾಡಿದ್ದಾರೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ದೀರ್ಘಕಾಲ ಸೇವೆ ಸಲ್ಲಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.

**ವರದಿ: ಎಸ್ ರವಿ ಹೊನ್ನೇನಹಳ್ಳಿ**

# ಕನಕದಾಸರು–ಪುರಂದರದಾಸರು ಕೀರ್ತನ ಸಾಹಿತ್ಯದ ಅಶ್ವಿನಿ ದೇವತೆಗಳು



**ಜಮಖಂಡಿ :** ಕನಕದಾಸರು, ಪುರಂದರದಾಸರನ್ನು ಕರ್ನಾಟಕ ಕೀರ್ತನ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ಬನ್ನಿಸಲಾಗಿದೆ. ಭಕ್ತ ಕನಕದಾಸರು ತಮ್ಮ ಕೀರ್ತನೆ ಸಾಹಿತ್ಯದ ಮೂಲಕ ಸಮಾಜದ ಅಸಮಾನತೆಯನ್ನು ತೊಡೆದು ಹಾಕುವ ಕನಸನ್ನು ಕಂಡಿದ್ದರೆಂದು ಪ್ರೊ.ಮೌನೇಶ ಬಡಿಗೇರ ಹೇಳಿದರು.

ನಗರದ ಸರಕಾರಿ ಪ್ರಥಮದರ್ಜೆ ಮಹಿಳಾ ಕಾಲೇಜಿನಲ್ಲಿ ದಾಸಶ್ರೇಷ್ಠ ಭಕ್ತಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಮಾಜದ ಓರೆಕೋರೆಗಳನ್ನು ತೆಗೆದು ಭಾತೃತ್ವ ಸಮಾಜದ ಕನಸನ್ನು ಕಂಡ ಮಹಾನ್ ಚೇತನ ಕನಕದಾಸರು ಆಗಿದ್ದರು. ಅಷ್ಟೇ ಅಲ ್ಲಕನ್ನಡ ಸಾಹಿತ್ಯಲೋಕ ಹಾಗೂ ಸಂಗೀತಲೋಕಕ್ಕೆ ತಮ್ಮದೆಯಾದ ಕೊಡುಗೆಗಳನ್ನು ವಿವಧ ರೂಪಗಳಲ್ಲಿ ನೀಡಿದ್ದಾರೆ.

ಮೋಹನ ತರಂಗಿಣಿ, ನಳಚರಿತ್ರೆ, ರಾಮಧಾನ್ಯ ಚರಿತ್ರೆ, ಹರಿಭಕ್ತ ಸಾರ, ಮೊದಲಾದ ಮಹಾಕಾವ್ಯಗಳನ್ನು ರಚಿಸಿದ್ದಾರೆ. ತಮ್ಮ ಕೀರ್ತನೆಯ ಮೂಲಕ ಭತ್ತ ಮತ್ತುರಾಗಿಯ ನಡುವಿನ ಸಂಭಾಷಣೆ ಮೂಲಕ ರಾಗಿ ಹೇಗೆ ತನ್ನ ಔನ್ನತ್ಯವನ್ನು ಸಾಬೀತು ಪಡಿಸುತ್ತಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲಕಿ ಡಾ.ಸುನಂದಾ ಶಿರೂರ ಮಾತನಾಡಿ, ಭಕ್ತಕನಕದಾಸರ ಚಿಂತನೆಗಳು ವಿಶ್ವ ಮಾನ್ಯವಾಗಿವೆ. ಭಕ್ತಿಪಂಥದ ಮೂಲಕ ಸಾಮಾಜಿಕ, ಧಾರ್ಮಿಕ ಶ್ರೇಯೋಭಿವೃದ್ಧಿಗೆ ಕನಕದಾಸರು ನೀಡಿದೆ ಕೊಡುಗೆ ಅತ್ಯಂತ ಅಪಾರವಾಗಿವೆ. ಅವರ ಕೀರ್ತನೆಗಳಲ್ಲಿ ಸಾಮಾಜಿಕ ಕಳಕಳಿಯಿದೆ. ಭಗವಂತ ನಾಮ ಸ್ಮರಣೆ ಯಲ್ಲಿ ಅಪಾರ ಶಕ್ತಿ ಅಡಗಿದೆ. ಶರಣದಾಸರತತ್ವ ಚಿಂತನೆಗಳು ಅನುಷ್ಠಾನವಾಗಬೇಕಿದೆ. ದಾಸಶ್ರೇಷ್ಠ ಭಕ್ತಕನಕದಾಸರ ವಿಚಾರ ಧಾರೆಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಅವಶ್ಯವಾಗಿದೆ ಎಂದರು.

ವೇದಿಕೆಯಲ್ಲಿ ಹಿರಿಯಪ್ರಾಧ್ಯಾಪಕ ಡಾ.ಎಂ.ಎಂ.ಮಂಟೂರ, ಅಪ್ಪಣ್ಣ ಪೂಜಾರಿ, ಡಿ.ಬಿ.ಚನ್ನಪ್ಪಗೋಳ, ಶಿವಲೀಲಾ, ಉಮೇಶ ದೇಸಾಯಿ, ರಾಜೇಶ ಜಾಧವ, ಡಾ.ಜಯಮ್ಮಾ, ಡಾ.ಅಶ್ವಿನಿ ಬಗಲಿ, ಡಾ.ಆರ್.ಎ. ಸಂಗಣ್ಣವರ, ಆರ್. ಎಲ್.ಚವ್ಹಾಣ, ಎಸ್.ಎಂ.ಗುಡಿ, ಸುಜಾತಾ ಬಸಪ್ಪಗೋಳ ಸಹಿತ ಹಲವರು ಇದ್ದರು.

ಸಾಂಸ್ಕೃತಿಕ ಘಟಕದ ಕಾರ್ಯಾಧ್ಯಕ್ಷ ಡಾ. ಅರುಣ ಕಾಂಬಳೆ ಸ್ವಾಗತಿಸಿದರು. ರಾಜೇಶ ಜಾಧವ ನಿರೂಪಿಸಿದರು. ಎಸ್.ಪಿ.ಆಲಗೂರ ವಂದಿಸಿದರು.



**ವಿಜಯ ಪದವಿ ಪೂರ್ವ ಶಾಲೆ ಗದಗ ವತಿಯಿಂದ ಒಂದು ದಿನದ ಹೊರ ಸಂಚಾರಕ್ಕೆ ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲೂಕಿನ ಗೊಟಗೋಡಿ ರಾಕ್ ಗಾರ್ಡನ್ ಗೆ ಭೇಟಿ ನೀಡಿದರು. ಅಲ್ಲಿ ವಿದ್ಯಾರ್ಥಿಗಳು ಶಿಕ್ಷಕ ಸಿಬ್ಬಂದಿ ವರ್ಗದವರು ಅಲ್ಪೋಪಾರವನ್ನು ಸೇವಿಸಿ ಗಾರ್ಡನ್ನಲ್ಲಿರುವ ಕಲಾಕೃತಿಗಳ ವೀಕ್ಷಣೆ ಮಾಡಿ ಸಂತೋಷಪಟ್ಟರು, ಮಧ್ಯಾಹ್ನದ ರುಚಿಕರ ಊಟವನ್ನು ಎಲ್ಲರೂ ಸವಿದು ರೇನ್ ಡ್ಯಾನ್ಸ್ , ಎತ್ತಿನಗಾಡಿನಲ್ಲಿ ಸಂಚಾರ , ಸ್ವಿಮ್ಮಿಂಗ್ ಪೂಲನಲ್ಲಿ ಆಟ ಹಾಗೆ ಇತ್ಯಾದಿ ಚಟುವಟಿಕೆಗಳನ್ನು ಮಾಡಿ ವಿದ್ಯಾರ್ಥಿಗಳು ಸಂತಸ ಪಟ್ಟರು. ವಿಜಯ ಪದವಿ ಪೂರ್ವ ಶಾಲೆ ಗದಗ ವತಿಯಿಂದ ಒಂದು ದಿನದ ಹೊರ ಸಂಚಾರಕ್ಕೆ ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲೂಕಿನ ಗೊಟಗೋಡಿ ರಾಕ್ ಗಾರ್ಡನ್ ಗೆ ಭೇಟಿ ನೀಡಿದರು. ಅಲ್ಲಿ ವಿದ್ಯಾರ್ಥಿಗಳು ಶಿಕ್ಷಕ ಸಿಬ್ಬಂದಿ ವರ್ಗದವರು ಅಲ್ಪೋಪಾರವನ್ನು ಸೇವಿಸಿ ಗಾರ್ಡನ್ನಲ್ಲಿರುವ ಕಲಾಕೃತಿಗಳ ವೀಕ್ಷಣೆ ಮಾಡಿ ಸಂತೋಷಪಟ್ಟರು, ಮಧ್ಯಾಹ್ನದ ರುಚಿಕರ ಊಟವನ್ನು ಎಲ್ಲರೂ ಸವಿದು ರೇನ್ ಡ್ಯಾನ್ಸ್ , ಎತ್ತಿನಗಾಡಿನಲ್ಲಿ ಸಂಚಾರ , ಸ್ವಿಮ್ಮಿಂಗ್ ಪೂಲನಲ್ಲಿ ಆಟ ಹಾಗೆ ಇತ್ಯಾದಿ ಚಟುವಟಿಕೆಗಳನ್ನು ಮಾಡಿ ವಿದ್ಯಾರ್ಥಿಗಳು ಸಂತಸ ಪಟ್ಟರು.**

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State